ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ರಾಯಚೂರಿನಿಂದ ರಾಜ್ಯದವರೆಗೆ

ಕನ್ನಡ ದಿನ ಪತ್ರಿಕೆ

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issuse : 187 | ದಿನಾಂಕ : 06-05-2026 Date : 06-05-2026 | ಬುಧವಾರ Wednesday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

# ವೋಟ್ ಚೋರಿ ಅಲ್ಲ, ವೋಟ್ ಡಕಾಯಿತಿ ಸಿಎಂ ಸಿದ್ದರಾಮಯ್ಯ



**ಬೆಂಗಳೂರು,ಮೇ.5**-ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ ವೋಟ್ ಚೋರಿ ಅಲ್ಲ. ಇದು ವೋಟ್ ಡಕಾಯಿತಿ ಆಗಿದೆ. ಅಂಚೆ ಮತ ಪತ್ರವ ನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, ಕೋರ್ಟ್ ಆದೇಶದಂತೆ ಪೋಸ್ಟಲ್ ಬ್ಯಾಲೆಟ್ ಮರು ಎಣಿಕೆ ಆಯಿತು. 2023ರ ಚುನಾವಣೆಯಲ್ಲಿ 201 ಮತಗಳ ಅಂತರದಿಂದ ರಾಜೇಗೌಡ ಅವರು ಗೆದ್ದಿದ್ದರು. ಅವರಿಗೆ 59,171 ಮತಗಳು ಬಂದಿದ್ದವು. ಬಿಜೆಪಿಯ ಜೀವರಾಜ್‌ಗೆ 58,970 ಮತಗಳು ಬಂದಿದ್ದವು. ರಾಜೇಗೌಡರಿಗೆ ಇವಿಎಂನಿಂದ ಬಂದ್ ಮತಗಳು 58,602. ಪೋಸ್ಟಲ್‌ನಿಂದ ಬಂದಿದ್ದು 569. ಜೀವರಾಜ್‌ಗೆ ಇವಿಎಂನಿಂದ 58,278 ಮತಗಳು ಬಂದಿದ್ದವು. ಅವರಿಗೆ ಪೋಸ್ಟಲ್‌ನಿಂದ ಬಂದ್ ಮತ 692. ಒಟ್ಟಾರೆಯಾಗಿ 201 ಮತಗಳಿಂದ ರಾಜೇಗೌಡ ➘4

**ಪ್ರಮುಖ ಅಂಶಗಳು**
- 2023 ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ 201 ಮತಗಳ ಅಂತರದಿಂದ ಗೆಲುವು
- ರಾಜೇಗೌಡರಿಗೆ ಒಟ್ಟು 59,171 ಮತ
- ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ 58,970 ಮತ
- ಹೈಕೋರ್ಟ್ ಆದೇಶದಂತೆ ಅಂಚೆ ಮತ ಮರು ಎಣಿಕೆ
- ಮರು ಎಣಿಕೆಯಲ್ಲಿ ಅಚ್ಚರಿಯ ಬದಲಾವಣೆ ಆರೋಪ

**2023ರ ಮೂಲ ಫಲಿತಾಂಶ**
- ಮೂಲ ಮತಗಳ ಲೆಕ್ಕಾಚಾರ
- ರಾಜೇಗೌಡ
- ಇವಿಎಂ ಮತ : 58,602
- ಅಂಚೆ ಮತ : 569
- ಒಟ್ಟು ಮತ : 59,171
- ಜೀವರಾಜ್
- ಇವಿಎಂ ಮತ : 58,278
- ಅಂಚೆ ಮತ : 692
- ಒಟ್ಟು ಮತ : 58,970
- ಫಲಿತಾಂಶ
- ರಾಜೇಗೌಡ ಗೆಲುವಿನ ಅಂತರ : 201 ಮತ

## ಹಾವೇರಿ: ದಿಢೀರ್ ಬೆಂಕಿಯಿಂದ ಹೊತ್ತಿ ಉರಿದ ಪಲ್ಲಕಿ ಬಸ್, ಪ್ರಯಾಣಿಕರು ಪಾರು




**ಹಾವೇರಿ,ಮೇ.5**-ಏಕಾಏಕಿ ಬೆಂಕಿ ಕಾಣಿಸಿಕೊಂಡು ಸಾರಿಗೆ ಬಸ್ ಹೊತ್ತಿ ಉರಿದ ಘಟನೆ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನ ದೇವರಗುಡ್ಡ ಗ್ರಾಮದ ಬಳಿ ರಾಜ್ಯ ಹೆದ್ದಾರಿಯಲ್ಲಿ ಇಂದು ಬೆಳಗ್ಗೆ ನಡೆದಿದೆ. ಬಸ್ ಬೆಂಗಳೂರಿನಿಂದ ಗದಗಕ್ಕೆ ಹೊರಟಿತ್ತು. ದೇವರಗುಡ್ಡ ಗ್ರಾಮದ ಸಮೀಪ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನಂದಿಸಲು ಬಸ್ ಸಿಬ್ಬಂದಿ ಹರಸಹಾಸಪಟ್ಟಿದ್ದಾರೆ.

ಚಾಲಕ ಪಕ್ಕೀರಪ್ಪ ಅವರ ಸಮಯ ಪ್ರಜ್ಞೆಯಿಂದ 17 ಪ್ರಯಾಣಿಕರ ಜೀವ ರಕ್ಷಣೆಯಾಗಿದೆ ಎಂದು ಹೇಳಲಾಗುತ್ತಿದೆ.

ರಾಣೇಬೆನ್ನೂರು ಗ್ರಾಮೀಣ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ➘4

## ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ: ನಿತೀಶ್ ಕೆ.

**ರಾಯಚೂರು, ಮೇ.5**-ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಪರಿಸ್ಥಿತಿಯನ್ನು ಅವಲೋಕಿಸಲು ಜಿಲ್ಲೆಯ ಪ್ರತಿ ತಾಲೂಕಿಗೆ ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳ ಹಾಗೂ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಿಸಬಹುದಾದ ಗ್ರಾಮಗಳ ವಿವರಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು, ಸದರಿ ತಮ್ಮ ತಮ್ಮ ತಾಲೂಕುಗಳ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ.ಅವರು ಸೂಚಿಸಿದ್ದಾರೆ. ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೂ ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಜಿ.ಪಿ.ಎಸ್ ಭಾವಚಿತ್ರದೊಂದಿಗೆ ತೆಗೆದುಕೊಂಡ ಪೊಟೋಗಳೊಂದಿಗೆ ತಾವು ತೆಗೆದುಕೊಂಡ ಕ್ರಮಗಳ ಕುರಿತು ವರದಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಂಗಾಳ ಮತ್ತು ಅಸ್ಸಾಂನಲ್ಲಿ ಶಾಸಕಾಂಗ ಪಕ್ಷದ ನಾಯಕರ ಆಯ್ಕೆ: ಬಿಜೆಪಿ ಕೇಂದ್ರ ವೀಕ್ಷಕರಾಗಿ ಅಮಿತ್ ಶಾ, ನಡ್ಡಾ ನೇಮಕ

**ನವದೆಹಲಿ,ಮೇ.5**-ಬಂಗಾಳ ಮತ್ತು ಅಸ್ಸಾಂ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಐತಿಹಾಸಿಕ ಗೆಲುವಿನ ನಂತರ, ಭಾರತೀಯ ಜನತಾ ಪಕ್ಷ ಶಾಸಕಾಂಗ ಪಕ್ಷದ ನಾಯಕರ ಆಯ್ಕೆ ಕಸರತ್ತು ಆರಂಭಿಸಿದೆ. ಪಶ್ಚಿಮ ಬಂಗಾಳದಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೇಂದ್ರ ವೀಕ್ಷಕರಾಗಿ ಪಕ್ಷ ನೇಮಕ ಮಾಡಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಬಿಡುಗಡೆ ಮಾಡಿದ ಅಧಿಕೃತ ಪ್ರಕಟಣೆಯ ಪ್ರಕಾರ, ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಜ್ಹಿ ಅವರನ್ನು ಪಶ್ಚಿಮ ಬಂಗಾಳಕ್ಕೆ ಸಹ - ವೀಕ್ಷಕರಾಗಿ ಹೆಸರಿಸಲಾಗಿದೆ. ಅಸ್ಸಾಂಗೆ ಕೇಂದ್ರ ಸಚಿವ ಮತ್ತು ಮಾಜಿ ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಕೇಂದ್ರ ವೀಕ್ಷಕರಾಗಿ ನೇಮಕ ಮಾಡಲಾಗಿದೆ. ಇನ್ನು ಹರಿಯಾಣ ➘4

## ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟ: ಇಬ್ಬರು ಆರೋಪಿಗಳ ಗಡಿಪಾರುಗೆ ಆದೇಶ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು ಮೇ.5**- ರಾಯಚೂರು ಉಪ ವಿಭಾಗದ ವ್ಯಾಪ್ತಿಯಲ್ಲಿ ಸಿ.ಹೆಚ್. ಕಲಬೆರಿಕೆ ಹೆಂಡ ಮಾರಾಟದಲ್ಲಿ ಭಾಗಿಯಾಗ ರೂಡಿಗತ ಆರೋಪಿಗಳಾದ ವಾಹೀದ್ ಅಲಿಯಾಸ್ ಚುಮಟಿ ತಂದೆ ಬರ್ಷಿದ್ (56) ಹಾಗೂ ಹುಸೇನಿ ಅಲಿಯಾಸ್ ರವಿ ತಂದೆ ಮಾರೆಪ್ಪ (32) ಇವರನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963 ಕಲಂ 55(ಎ) (ಬಿ) ಅಡಿಯಲ್ಲಿ ರಾಯಚೂರು ಉಪ ವಿಭಾಗೀಯ ದಂಡಾಧಿಕಾರಿಗಳಾದ ಡಾ.ಹಂಪಣ್ಣ ಸಜ್ಜನ್ ಅವರು ಮೇ.04ರಂದು ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

ವಾಹೀದ್ ಚುಮಟಿ ತಂದೆ ಬರ್ಷಿದ್ (56) ಆರೋಪಿಯನ್ನು ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಸಂತಪೂರು ಪೋಲಿಸ್ ಠಾಣೆಯ ವ್ಯಾಪ್ತಿಗೆ ಹಾಗೂ ಹುಸೇನಿ ರವಿ ತಂದೆ ಮಾರೆಪ್ಪ (32) ಬೀದರ್ ಜಿಲ್ಲೆಯ ಔರಾದ (ಬಿ) ತಾಲೂಕಿನ ಚಿಂತಕಿ ಪೋಲಿಸ್ ಠಾಣೆಯ ವ್ಯಾಪ್ತಿಗೆ ದಿನಾಂಕ: 05-05-2026 ರಿಂದ 05-08-2026ರವರೆಗೆ (ಮೂರು ತಿಂಗಳು) ಬೀದರ್ ಜಿಲ್ಲೆಗೆ ಗಡಿಪಾರು ಮಾಡಿಲಾಗಿದ್ದು, ಆರೋಪಿಗಳು ಆಯಾ ಪೊಲೀಸ್ ಠಾಣೆಯ ಠಾಣಾಧಿಕಾರಿಯವರ ಮುಂದೆ ಪ್ರತಿ ವಾರಕ್ಕೊಮ್ಮೆ ತಪ್ಪದೇ ಹಾಜರಾಗಬೇಕೆಂದು ರಾಯಚೂರು ಉಪ ವಿಭಾಗೀಯ ದಂಡಾಧಿಕಾರಿಗಳಾದ ಡಾ.ಹಂಪಣ್ಣ ಸಜ್ಜನ್ ಅವರು ಆದೇಶ ಹೊರಡಿಸಿದ್ದಾರೆ.

## ಕಸಾಪವನ್ನು ಬೆಳೆಸಿ ಉಳಿಸಿ, ಪೋಷಿಸುವ ಜವಾಬ್ದಾರಿ ಎಲ್ಲರದ್ದು: ರವಿ ರಾಜೇಶ್ವರ

**ರಾಯಚೂರು,ಮೇ.5**-ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ್ದು ಅದನ್ನು ಪೋಷಿಸಿ ಉಳಿಸಿ ಬೇಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ವೈದ್ಯ ಡಾ.ರವಿ ರಾಜೇಶ್ವರ ಹೇಳಿದರು.

ಅವರಿಂದು ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಎಂ.ವಿಶ್ವೇಶ್ವರಯ್ಯನವರ ಕಾಲದಲ್ಲಿ, 1915ರಲ್ಲಿ ಕನ್ನಡ ನಾಡು-ನುಡಿಯ ಸೇವೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂದಿತು. ಎಚ್.ವಿ. ನಂಜುಂಡಯ್ಯನವರು ಪರಿಷತ್ತಿನ ಮೊದಲ ಅಧ್ಯಕ್ಷರಾಗಿದ್ದರು. ಈ ದಿನವು ಕನ್ನಡಿಗರಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ಸಾಹಿತ್ಯ ಪರಿಷತ್ತಿನ



ಸೇವೆಗಳನ್ನು ಸ್ಮರಿಸುವ ದಿನವಾಗಿದೆ ಎಂದರು.

ಕನ್ನಡ ಭಾಷೆಯ ಬೆಳವಣಿಗೆ ಮತ್ತು ಕರ್ನಾಟಕ ಏಕೀಕರಣಕ್ಕೆ ಸಾಹಿತ್ಯ ಪರಿಷತ್‌ನ ಪಾತ್ರ ಬಹುಮುಖ್ಯವಾಗಿದೆ. ಕಸಾಪ ಸ್ಥಾಪನೆಗೊಂಡ ಬಳಿಕ ರಾಜ್ಯದ ವಿವಿಧ ಜಿಲ್ಲೆಯಲ್ಲಿ ಆರಂಭಗೊಂಡು ನಾವೆಲ್ಲ ಒಂದು ಎಂದು ಸಾರಲಾಯಿತು.

ಕನ್ನಡವು ನಮ್ಮ ಬದುಕಿನ ಭಾಗ, ನಮ್ಮ ಸಂಸ್ಕೃತಿ, ಜೀವನ ಶೈಲಿ, ಬದುಕು ಎಲ್ಲೆಡೆಯೂ ಕನ್ನಡವಿದೆ. ಕನ್ನಡ ನಮ್ಮ ಅಸ್ಮಿತೆ, ಕನ್ನಡ ಸಾಹಿತ್ಯ ಪರಿಷತ್ತಿಗೆ ಭವ್ಯವಾದ ಇತಿಹಾಸವಿದ್ದು, ➘4

## ಕೇರಳದಲ್ಲೂ ನೆಲೆ ಕಂಡುಕೊಂಡ ಬಿಜೆಪಿ: 3 ಕಡೆ ಅರಳಿದ ಕಮಲ, 6 ಕ್ಷೇತ್ರಗಳಲ್ಲಿ ಎರಡನೇ ಸ್ಥಾನ

**ತಿರುವನಂತಪುರಂ(ಕೇರಳ),ಮೇ.5**-ದೀರ್ಘಕಾಲದಿಂದ ರಾಜ್ಯದಲ್ಲಿ ತನ್ನ ನೆಲೆ ಕಂಡುಕೊಳ್ಳಲು ಕಸರತ್ತು ನಡೆಸುತ್ತಿದ್ದ ಬಿಜೆಪಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಜಯಗಳಿಸಿ ಗಮನಾರ್ಹ ಸಾಧನೆ ಮಾಡಿದೆ. ಇದರ ಜೊತೆಗೆ 6 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡಿ ಎರಡನೇ ಸ್ಥಾನ ಗಳಿಸಿದೆ.

ನಿನ್ನೆ(ಮೇ 4) ನಡೆದ ಮತ ಎಣಿಕೆಯಲ್ಲಿ ತಿರುವನಂತಪುರದ ನೇಮಂ ಕ್ಷೇತ್ರದಿಂದ ಬಿಜೆಪಿ ಕೇರಳಂ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್, ಕಜಕ್ಕೂಟ್ಟಂ ಕ್ಷೇತ್ರದಿಂದ ವಿ. ಮುರಳೀಧರನ್ ಹಾಗೂ ಕೊಲ್ಲಂ ಜಿಲ್ಲೆಯ ಚಾತ್ತನ್ನೂರ್ ಕ್ಷೇತ್ರದಿಂದ ಬಿ. ಬಿ. ಗೋಪಕುಮಾರ್ ಗೆಲುವು ಸಾಧಿಸಿ ರಾಜ್ಯದಲ್ಲಿ ➘4

## ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದ ಸಿಇಓ-ವಿಶ್ವನಾಥ ಬಲ್ಲಿದವ್ ಆರೋಪ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.5**-ಜಿಲ್ಲಾ ಪಂಚಾಯತ್‌ನಲ್ಲಿ ಯೋಜನಾ ನಿರ್ದೇಶಕ ಶರಣಬಸವ, ಅರಕೇರಾ ಕಾರ್ಯ ನಿರ್ವಾಹಕ ಅಧಿಕಾರಿ ಅಣ್ಣಾರಾವ್ ಹಾಗೂ ಹೊಂಬಡ್ಸನ್ ಎಂಬ ಅಧಿಕಾರಿಗಳಿಂದ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದ್ದು, ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಆರೋಪಗಳಿವೆ. ಕೂಡಲೇ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಭೀಮ್ ಆರ್ಮಿ ಸಂಘಟನೆಯ ದೇವದುರ್ಗ ತಾಲೂಕಾಧ್ಯಕ್ಷ ವಿಶ್ವನಾಥ ಬಲ್ಲಿದವ್ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ➘4

## ಉಪಚುನಾವಣೆಗಳಲ್ಲಿ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು: ಕಾರ್ಯಕರ್ತರಿಂದ ಸಂಭ್ರಮಾಚರಣೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.5**-ಇತ್ತೀಚೆಗೆ ನಡೆದ ಬಾಗಲೋಟೆ, ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನಲೆ ಕಾಂಗ್ರೆಸ್ ಪಕ್ಷದ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸೋಮವಾರ ಸಂಜೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಪರ ಘೋಷಣೆ ಕೂಗಿ, ನಂತರ ಸ್ಥಳಕ್ಕೆ ಆಗಮಿಸಿದ ಪಕ್ಷ ರಾಜ್ಯ ಯುವ ಮುಖಂಡ ರವಿ ಬೋಸರಾಜು ಅವರನ್ನು ಹೊತ್ತು ಘೋಷಣೆ ಹಾಕಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಶ್ರೀನಿವಾಸ ರೆಡ್ಡಿ, ಬಿ.ರಮೇಶ, ಸೇರಿದಂತೆ ಅನೇಕರಿದ್ದರು.

## ಹಂಪನಗೌಡ ಬಾದರ್ಲಿರಿಗೆ ಸೂಕ್ತವಾದ ಸಚಿವ ಸ್ಥಾನ ನೀಡಿ: ಹರವಿ ನಾಗನಗೌಡ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.5**-ರಾಜ್ಯ ಸರ್ಕಾರದ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಯ ಹಿರಿಯ ನಾಯಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಜಿಲ್ಲೆ ಸೇರಿದಂತೆ ಇಡೀ ರಾಜ್ಯದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಜಿಲ್ಲಾ ವೀರಶೈವ ಲಿಂಗಾಯತ್ ಸಮಾಜದ ಗೌರವಾಧ್ಯಕ್ಷ ಹರವಿ ನಾಗನಗೌಡ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಕಳೆದ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ಸಾರ್ವಜನಿಕ ಜೀವನದಲ್ಲಿ ಸಕ್ರೀಯರಾಗಿದ್ದಾರೆ. ಜೊತೆಗೆ ಸಮಾಜ ಸೇವೆ, ವಿವಿಧ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದು, ರಾಜಕೀಯ ಅನುಭವವೂ ಹೆಚ್ಚಿರುವುದರಿಂದ ಅವರಿಗೆ ಸೂಕ್ತ ಸಚಿವ ಸ್ಥಾನ ನೀಡುವುದು ಅತ್ಯಂತ ಅವಶ್ಯಕವಾಗಿದೆ ಎಂದರು.

ಅತ್ಯಂತ ಹಿರಿಯರಾದ ಅವರಿಗೆ ಸಚಿವ ಸ್ಥಾನ ನೀಡಿದರೇ ಪಕ್ಷಕ್ಕೂ ಒಂದು ಗೌರವ ಮತ್ತು ಪಕ್ಷದಲ್ಲಿ ದುಡಿಯುವ ಕಾರ್ಯಕರ್ತರಿಗೆ ಸ್ಥಾನಮಾನ ಸಿಗುತ್ತದೆ ಎಂಬುವುದಕ್ಕೆ ಉದಾಹರಣೆಯಾಗುತ್ತದೆ. ಜೊತೆಗೆ ಅವರು ಸಚಿವ ಸ್ಥಾನ ನೀಡಿದರೇ ಇಡೀ ವೀರಶೈವ ಲಿಂಗಾಯತ ಸಮಾಜ ಅತ್ಯಂತ ಹರ್ಷವನ್ನು ವ್ಯಕ್ತಪಡಿಸುತ್ತದೆ ಎಂದು ಹೇಳಿದರು. ➘4

### ಪಂಚ ರಾಜ್ಯ ಚುನಾವಣೆ: ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು

## ಬಿಜೆಪಿಯಿಂದ ವಿಜಯೋತ್ಸವ ಆಚರಣೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಮೇ.5**-ಇತ್ತೀಚೆಗೆ ನಡೆದ ಪಂಚ ರಾಜ್ಯ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಮೂರು ರಾಜ್ಯಗಳಲ್ಲಿ ಬಹುಮತವನ್ನು ಸಾಧಿಸಿದ್ದು, ಈ ಫಲಿತಾಂಶ ದೇಶದ ಹಿಂದೂ ವಿರೋಧಿಗಳಿಗೆ ದೊಡ್ಡ ಹೊಡೆತವನ್ನು ತಂದಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಎನ್. ಶಂಕ್ರಪ್ಪ ಹೇಳಿದರು.

ಅವರಿಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸೋಮವಾರ ಸಂಜೆ ಜಿಲ್ಲಾ ಬಿಜೆಪಿ ಪಕ್ಷದಿಂದ ಹಮ್ಮಿಕೊಂಡಿದ್ದ ವಿಜಯೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಗೆಲುವು ಸಾಧಿಸಿದ್ದು, ಅದರಲ್ಲೂ ಪಶ್ಚಿಮ ಬಂಗಾಳದಲ್ಲಿ

ಬಿಜೆಪಿ ಅಧಿಕಾರಕ್ಕೆ ಬಂದಿರುವುದು ದೇಶದಲ್ಲಿ ಹೊಸ ರಾಜಕೀಯ ಹಾಗು ಊಹಿಸಲಾಗದ ಅಲೆ ಪ್ರಾರಂಭವಾಗಿದೆ.

ಇದಕ್ಕೆ ಪಕ್ಷದ ವರಿಷ್ಠರ ಶ್ರಮ ಬಹಳ ಇದ್ದು, ಜೊತೆಗೆ ಕಾರ್ಯಕರ್ತರು ಕೂಡ ಸಾಕಷ್ಟು ಶ್ರಮಿಸಿದ್ದಾರೆ ಎಂದರು.

## ಮಾನ್ವಿ : ಹಿಂಗಾರು ಜೋಳ ಖರೀದಿ ಪ್ರಾರಂಭಿಸುವಂತೆ ಒತ್ತಾಯಿಸಿ ರೈತ ಸಂಘದಿಂದ ಮನವಿ



ಕನ್ನಡ ಮಾತೃ ಭೂಮಿ ವಾರ್ತೆ

**ಮಾನ್ವಿ,** ಪಟ್ಟಣದ ತಹಶೀಲ್ದಾರ್ ಕಚೇರಿ ಅವರಣದಲ್ಲಿ ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘ ತಾಲೂಕು ಘಟಕವತಿಯಿಂದ ಜಿಲ್ಲಾಧಿಕಾರಿಗಳಿಗೆ ತಹಶೀಲ್ದಾರ್ ಭೀಮರಾಯ ಬಿ.ರಾಮ ಸಮುದ್ರರವರ ಮೂಲಕ ಮನವಿ ಸಲ್ಲಿಸಿ ರೈತ ಮುಖಂಡರಾದ ದುರುಗಪ್ಪ ತಡಕಲ್ ಮಾತನಾಡಿ ತಾಲೂಕಿನಲ್ಲಿ ಹಿಂಗಾರು ಬೆಳೆಯಾಗಿ ರೈತರು ಬೆಳೆದ ಜೋಳವನ್ನು ಬೆಂಬಲ ಬೆಲೆಯೋಜನೆಯಡಿಯಲ್ಲಿ ಜೋಳ ಖರೀದಿ ಕೇಂದ್ರಗಳ ಮೂಲಕ ಕೂಡಲೇ ಖರೀದಿ ಮಾಡಬೇಕು.

ಇಲ್ಲದೆ ಇದ್ದಲ್ಲಿ ರೈತರು ಬೆಳೆದ ಜೋಳಕ್ಕೆ ಮಳೆಯಿಂದಾಗಿ ತೇವಾಂಶ ಹೆಚ್ಚಿ ಹುಳು ಸೇರಿಕೊಳ್ಳುತ್ತವೆ ಹಾಗೂ ರೈತರು ಜೂನ್ ನಲ್ಲಿ ಬೀತ್ತನೆ ಮಾಡುವುದಕ್ಕೆ ಅಗತ್ಯ ಹಣಕಾಸು ದೊರೆಯುವುದಿಲ್ಲ. ಹಾಗೂ ಕೇಲವು ರೈತರು ಜೋಳ ಬೆಳೆದಿದ್ದಾರು ಕೂಡ ಎಫ್.ಐ.ಡಿ.ಯಲ್ಲಿ ಜೋಳ ಎಂದು ನಮೂದಿಸದೆ ಇರುವುದರಿಂದ ಬ್ಲಾಕ್ ಅಗಿದ್ದು ಕೂಡಲೆ ಅನ್ ಬ್ಲಾಕ್ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ರೈತರಿಂದ ಮುಂಗಾರಿನ ಜೋಳವನ್ನು ಖರೀದಿಮಾಡುವುದು ಪೂರ್ತಿಯಾಗಿದು ಹಿಂಗಾರು ಜೋಳ ಖರೀದಿಯನ್ನು ಪ್ರಾರಂಭಿಸಲಾಗುವುದು. ತಾಲೂಕಿನಲ್ಲಿ ಅಂದಾಜು 15ಸಾವಿರ ಅರ್ಜಿಗಳು ರೈತರಿಂದ ಸಲ್ಲಿಕೆಯಾಗಿದು ಅವು ಗಳಲ್ಲಿ ಸರಿಯಾಗಿ ಜೋಳದ ಬೆಳೆ ಬೆಳೆದಿರುವ ಬಗ್ಗೆನಮೂದಿಸದೆ ಇರುವಂತ 2850 ಅರ್ಜಿಗಳನ್ನು ಬ್ಲಾಕ್ ಮಾಡಲಾಗಿದೆ.

340 ರೈತರು ತಾವು ತಮ್ಮ ಜಮೀನಿನಲ್ಲಿ ಜೋಳವನ್ನು ಬೆಳೆದಿರುವುದಕ್ಕೆ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದು ಅಂತಹ ರೈತರ ಜಮೀನಿಗೆ ಗ್ರಾಮ ಲೇಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು ಪರಿಶೀಲಿಸಿ ನೀಡಿದ ವರದಿಯಂತೆ ಅನ್ ಬ್ಲಾಕ್ ಮಾಡಿ ಜೋಳ ಮಾರಾಟಕ್ಕೆ ಅನುಕೂಲ ಮಾಡಿಕೊಡಲಾಗಿದೆ.

126 ಅರ್ಜಿಗಳು ಪರಿಶೀಲನೆ ಹಂತದಲ್ಲಿ ಇವೇ. ಜೋಳದ ಬೆಳೆ ಸಮೀಕ್ಷೆಯಲ್ಲಿ ಲೋಪವೆ ಸಗಿದ ಸಮೀಕ್ಷೆದಾರರ ಮೇಲೆ ಕ್ರಿಮಿನಲ್ ಮೊಕದಮೆಯನ್ನು ಹೂಡಲಾಗಿದೆ. ರೈತರು 150 ಕ್ವಿಂಟಾಲ್ ವರಗೆ ಮಾರಾಟ ಮಾಡಬಹುದಾಗಿದೆ ರೈತರ ಎಲ್ಲಾ ಬೇಡಿಕೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರೈತಪರ ಹೋರಾಟಗಾರರಾದ ದ್ಯಾವಪ್ಪ, ಮಹಾಲಿಂಗಪ್ಪ, ಬಸಪ್ಪ,ಬಾಲಯ್ಯ, ಗಣೇಶ, ಈರಪ್ಪ, ಅಮರೇಶ, ಹನುಮಂತ, ದ್ಯಾವಪ್ಪ, ರಾಮನಗೌಡ, ಸದಾನಂದಗೌಡ, ಮಲ್ಲನಗೌಡ, ಲಕ್ಷ್ಮಣ್ , ಫಕ್ರದ್ದಿನ್, ಲಕ್ಷ್ಮಣ,ವೀರೇಶ ಸೇರಿದಂತೆ ಇನ್ನಿತರರು ಇದ್ದರು.


### ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಪ್ರವಚನ ಪ್ರಾರಂಭೋತ್ಸವ

## ಮಲ್ಲಮ್ಮತಾಯಿ ಅನುಗ್ರಹದಿಂದ ನೆಮ್ಮದಿಯ ಜೀವನ-ಯಾಳಗಿ

ಕನ್ನಡ ಮಾತೃ ಭೂಮಿ ವಾರ್ತೆ

**ತಾಳಿಕೋಟೆ,**ಹಿಂದೆ ಗುರುವಿನ ಆಶೀರ್ವಾದ ವಿತ್ತು, ಪ್ರಾಮಾಣಿಕ ಬದುಕಿತ್ತು, ಕಷ್ಟಗಳ ಮಧ್ಯೆಯೂ ಸುಖ ನೆಮ್ಮದಿಯಿತ್ತು. ಆದರೆ ಇಂದು ಬಡತನ ತೊಲಗಿ ಸುಖವಿ ದೆ ಎಂದುಕೊಂಡರೂ ಶಾಂತಿ-ನೆಮ್ಮದಿ ಉಳಿದಿಲ್ಲ ಈ ಶಾಂತಿ ನೆಮ್ಮದಿಗೆ ಪುರಾಣ ಪ್ರವಚನಗಳು ನಮಗೆ ದಾರಿದೀಪವಾಗಿವೆ ಎಂದು ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಎಸ್.ಪಾಟೀಲ ಯಾಳಗಿ ಹೇಳಿದರು.

ರವಿವಾರರಂದು ಪಟ್ಟಣದ ಹೇಮ ರೆಡ್ಡಿ ಮಲ್ಲಮ್ಮ ತಾಯಿಯ ದೇವಸ್ಥಾನದಲ್ಲಿ ಇದೇ ಮೇ 10ರಂದು ಜರುಗುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ತಾಯಿಯ 604ನೆಯ ಜಯಂತಿಯ ಪ್ರಯುಕ್ತ ಹಮ್ಮಿಕೊಂಡಿರುವ ವರದಾನಿ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಪ್ರವಚನ ಪ್ರಾರಂಭೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು ಹೇಮರಡ್ಡಿ ಮಲ್ಲಮ್ಮ ತಾಯಿಯು ಇಡೀ ರಡ್ಡಿ ಕುಲಕ್ಕೆ ವರವನ್ನು ನೀಡಿದ್ದಾಳೆ ಸುಃಖಶಾಂತಿ ನೆಮ್ಮದಿಯನ್ನು ಕರುಣಿಸಿದ ಮಹಾನ ತಾಯಿಯಾಗಿದ್ದಾಳೆ ಮಲ್ಲಮ್ಮ ತಾಯಿಯ ಜಯಂತ್ಯೋತ್ಸವ ನಿಮಿತ್ಯವಾಗಿ ಗುಡ್ಡಾಪೂರ ದಾನಮ್ಮತಾಯಿಯ ಪುರಾಣ ಪ್ರವಚನ ಆಯೋಜಿಸಿ ಸಮಾಜದ ಜನರನ್ನು ಆದ್ಯಾತ್ಮೀಕತೆಯಲ್ಲಿ ತೊಡಗಿಕೊಳ್ಳಲು ಅನುವು ಮಾಡಿರುವದು ಶ್ಲಾಘನೀಯವಾಗಿದೆ ಎಂದರು.



ಪುರಾಣ ಪ್ರವಚನಕಾರ ಯಾಳಗಿಯ ಸೋಮಶೇಖರಮಠದ ವೇ.ಮೂ.ಬಸಯ್ಯ ಶಾಸ್ತ್ರೀಯವರು ವರದಾನಿ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಪ್ರವಚನಕ್ಕೆ ಚಾಲನೆ ನೀಡಿದರಲ್ಲದೇ ಪುರಾಣ ಪ್ರವಚನವು ಮೇ.10ರವರೆಗೆ ಪ್ರತಿದಿನ ಪ್ರತಿದಿನ ಸಾಯಂಕಾಲ 6.30 ರಿಂದ 7. 30 ರ ವರೆಗೆ ಜರುಗಲಿದೆ ಸಮಾಜ ಬಾಂದವರು ಭಾಗವಹಿಸಿ ಶ್ರೀದಾನಮ್ಮತಾಯಿಯ ಹಾಗೂ ಹೇಮರಡ್ಡಿ ಮಲ್ಲಮ್ಮತಾಯಿಯ ಕೃಪೆಗೆ ಪಾತ್ರರಾಗಬೇಕೆಂದರು.

ವೇದಿಕೆಯಲ್ಲಿ ಸಾನ್ನಿಧ್ಯವಹಿಸಿದ್ದ ಶಾಂತಮ್ಮತಾಯಿ ಕೋಳೂರ, ನೇತೃತ್ವವನ್ನು ವಹಿಸಿರುವ ಸಿ.ಎಂ ಹಿರೇಮಠ ಹಾಗೂ ಎಸ್.ಎಂ.ಬೇನಾಳಮಠ, ಅತಿಥಿಗಳಾಗಿ ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಭಾಜಪ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಆರ್.ಎಸ್. ಪಾಟೀಲ ಕೂಚಬಾಳ, ಜೆ.ಎಸ್.ಜಿ ಫೌಂಡೇಶನ್ ಕಾರ್ಯದರ್ಶಿ ಶ್ರೀಕಾಂತ ಪತ್ತಾರ, ಎಸ್.ಎಸ್.ಗಡೇದ, ಸಂಗೀತಸೇವೆ ನೀಡುತ್ತಿರುವ ಸ್ಥಳೀಯ ಖಾಸ್ಗತೇಶ್ವರ ಸಂಗೀತಪಾಠಶಾಲೆಯ ಗವಾಯಿ ಮಡಿವಾಳಯ್ಯ ಯಲಗೋಡ, ಹಾಗೂ ತಬಲಾ ಸಾಥಿಯಾಗಿ ಪ್ರವೀಣ ಪತ್ತಾರ ಉಪಸ್ಥಿತರಿದ್ದರು.

ಸೌಮ್ಯಾ ಪಾಟೀಲ ಭರತ ನಾಟ್ಯ ಪ್ರದರ್ಶನ ನೀಡಿದರು. ಶಿಕ್ಷಕಿ ಪ್ರತಿಭಾ ಬಿರಾದಾರ ಪ್ರಾರ್ಥಿಸಿದರು. ಶಿಕ್ಷಕ ಅಪ್ಪಾಸಾಹೇಬಗೌಡ ಮೂಲಿಮನಿ ನಿರೂಪಿಸಿದರು. ಹೇಮರಡ್ಡಿ ಮಲ್ಲಮ್ಮ ಅಸೋಶಿಯೇಶನ್ ಉಪಾಧ್ಯಕ್ಷ ಎಚ್.ಎಸ್.ಪಾಟೀಲ, ಸ್ವಾಗತಿಸಿದರು.

ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಸುಮಂಗಲಾ ಕೋಳೂರ ಹಾಗೂ ರುದ್ರಮ್ಮ ದೇಸಾಯಿ, ಬಿ.ಎಸ್.ದ್ಯಾಪುರ, ಸಂಗನಗೌಡ ಅಸ್ಕಿ, ಎಸ್.ಐ.ಕಡಕೋಳ, ರವೀಂದ್ರ ಪಾಟೀಲ, ಶಶಿಧರ ಓತಗೇರಿ, ಶಶಿಧರ ಕೇಸರಭಾವಿ, ದ್ರಾಕ್ಷಾಯಿಣಿ ಮದರಕಲ್ಲ, ಸವಿತಾ ಅಸ್ಕಿ, ಮಲ್ಲಣ್ಣ ಮೇಟಿ, ಬಸರಕೋಡ, ಪ್ರವೀಣ ರೆಡ್ಡಿ ಇತರರಿದ್ದರು.

## ಇಂದು ಬಲ್ಡೋಟ ಅತಿಕ್ರಮಣ ಬಸಾಪುರ ಕೆರೆ ಉಳಿಸಲು ಬೃಹತ್ ಹೋರಾಟ



ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,**ಬಳ್ಡೋಟ ಎಐಎಸ್ಎಲ್ ಅತಿಕ್ರಮಣದಿಂದ ಬಸಾಪುರ ಕೆರೆ ಸುಮಾರು 44 35 ಎಕರೆಯನ್ನು ಕೆರೆ ಒತ್ತುವರಿ ಜಮೀನನ್ನು ಬಿಡಿಸಲು ಜನ ಮತ್ತು ಜಾನುವಾರು ಗಳು ನೀರು ಕುಡಿಯಲು ಮುಕ್ತ ಗೊಳಿಸಲು ಒತ್ತಾಯಿಸಿ ನಾಳೆ ಮೇ 5 ರ ಮಟಗಳವಾರ ದಂದು ಬೃಹತ್ ಪ್ರತಿಭಟನೆ ಮತ್ತು ಹೋರಾಟ ನಡೆಯಲಿದೆ ಎಂದು ರೈತ ಹೋರಾಟಗಾರ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಭೀಮಸೇನ್ ಕಲಿಕೇರಿ ತಿಳಿಸಿದ್ದಾರೆ.

ಅವರು ಸೋಮವಾರದಂದು ನಗರದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿ ಈ ಕುರಿತು ತಮ್ಮ ನಿರ್ಧಾರ ಪ್ರಕಟಿಸಿದರು ,ಸರ್ಕಾರ ಕೂಡಲೇ ನಗರದ ಸುಮಾರು ಒಂದುವರೆ ಲಕ್ಷ ಜನರ ಆರೋಗ್ಯದ ಹಿತದೃಷ್ಟಿಯಿಂದ ಬಲದೋಟ ಬಿ ಎಸ್ ಪಿ ಎಲ್ ಕಾರ್ಖಾನೆಯ 54,000 ಕೋಟಿ ಹೂಡಿಕೆಯ ವಿಸ್ತೀರ್ಣ ರದ್ದು ಮಾಡಬೇಕು ಹಾಗೂ 2011 ರಿಂದ ನಡೆಯುತ್ತಿರುವ ಎಂ ಎಸ್ ಪಿ ಎಲ್ ಪೆಲ್ಲೆಟ್ ಘಟಕ ಕೂಡಲೇ ತೆಗಿತಗೊಳಿಸಬೇಕು ಅರ್ಧದಷ್ಟು ನಗರ ಜನರ ಜೀವ ಕಾಪಾಡಲು ಇದನ್ನು ಕೂಡಲೇ ಬಂದು ಮಾಡಬೇಕು ಎಂದು ಒತ್ತಾಯಿಸಿದರು, ಮಂಗಳವಾರದಂದು ಕೆರೆ ಉಳಿಸಿ ಹೋರಾಟದಲ್ಲಿ ಸಾವಿರಾರು ಕುರಿ ಜಾನುವಾರು ಸಹಿತ ನೀರು ಕುಡಿಯಲು

ನಡೆಸುವ ಹೋರಾಟ ಯಶಸ್ವಿಗೆ ವಿವಿಧ ಸಂಘಟನೆಗಳು ಸಹಕಾರ ನೀಡಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಭೀಮಸೇನ್ ಕಲಿಕೇರಿ ಮನವಿ ಮಾಡಿಕೊಂಡರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಮೂಕಪ್ಪ ಏನ್ ಮೇಸ್ತ್ರಿ ,ತಿಪ್ಪೇಸ್ವಾಮಿ ಹಿರೇಮಠ, ಶೇಕಪ್ಪ ಮೈನಹಳ್ಳಿ, ಯಮನೂರಪ್ಪ ಹಾಲಹಳ್ಳಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಕಾರ್ಮಿಕ ನ್ಯಾಯಾಲಯ ಮತ್ತು ಸರ್ಕಾರದ ನಿರ್ದೇಶನಗಳನ್ನು ಪಾಲಿಸಿ; ಇಲ್ಲದಿದ್ದರೆ ಲಿಖಿತ ಉತ್ತರ ನೀಡಿ: ಕೆ.ನಾಗಲಿಂಗಸ್ವಾಮಿ

### ತುಂಗಭದ್ರಾ, ನೀರಾವರಿ ಕಾರ್ಮಿಕರ ಸಂಘದಿಂದ ಅಧಿಕಾರಿಗಳಿಗೆ ಎಚ್ಚರಿಕೆ: ಎಐಸಿಸಿಟಿಯು

ಕನ್ನಡ ಮಾತೃ ಭೂಮಿ ವಾರ್ತೆ

**ಗಂಗಾವತಿ,** ತುಂಗಭದ್ರಾ, ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ವತಿಯಿಂದ ಕಾರ್ಮಿಕ ನ್ಯಾಯಾಲಯ, ಕಾರ್ಮಿಕ ಇಲಾಖೆ ಹಾಗೂ ಸರ್ಕಾರದ ನಿರ್ದೇಶನಗಳನ್ನು ತಕ್ಷಣ ಜಾರಿಗೊಳಿಸಿ ಕಾರ್ಮಿಕರ ಬಾಕಿ ವೇತನ ಪಾವತಿಸಬೇಕು. ಇಲ್ಲದಿದ್ದರೆ ಸಂಬಂಧಿಸಿದ ಅಧಿಕಾರಿಗಳು ಲಿಖಿತವಾಗಿ ಸ್ಪಷ್ಟ ಉತ್ತರ ನೀಡಬೇಕು ಎಂದು ಆಗ್ರಹಿಸಲಾಗಿದೆ.

ಇಂದು ತುಂಗಭದ್ರಾ, ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ವಡ್ಡರಹಟ್ಟಿ ಮತ್ತು ಕಾರಟಗಿ ಉಪ ವಿಭಾಗದ ಕಾರ್ಮಿಕರಿಂದ ಕಾರ್ಯಪಾಲಕ ಅಭಿಯಂತರರ ಕಚೇರಿ ಎದುರು ನಡೆದ ಪ್ರತಿಭಟನಾ ಹೋರಾಟವನ್ನು ಉದ್ದೇಶಿಸಿ ಮಾತನಾಡಿದ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷ ಕೆ.ನಾಗಲಿಂಗಸ್ವಾಮಿ ಕಳೆದ ಹಲವು ತಿಂಗಳುಗಳಿಂದ ತುಂಗಭದ್ರಾ, ನೀರಾವರಿ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ವೇತನ ಪಾವತಿಸದೇ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಆರೋಪಿಸಲಾಗಿದೆ. ಸಂಧಾನ ಸಭೆಗಳಲ್ಲಿ ಹಾಗೂ ಕಾರ್ಮಿಕ ಇಲಾಖೆಯ ಮುಂದಾಳತ್ವದಲ್ಲಿ ತೆಗೆದುಕೊಳ್ಳಲಾದ ನಿರ್ಧಾರಗಳನ್ನೂ ಜಾರಿಗೊಳಿಸದೇ ಇರುವುದರಿಂದ ಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.



ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಕನಿಷ್ಠ ವೇತನ, ಇಎಸ್ಐ, ಪಿಎಫ್ ಸೇರಿದಂತೆ ಕಾನೂನುಬದ್ಧ ಸೌಲಭ್ಯಗಳನ್ನು ನೀಡಬೇಕಾದ ಸರ್ಕಾರದ ಸಂಸ್ಥೆಯೇ ಕಾರ್ಮಿಕ ಕಾಯ್ದೆಗಳನ್ನು ಉಲ್ಲಂಘಿಸುತ್ತಿರುವುದು ಖಂಡನೀಯ ಎಂದು ಸಂಘ ಹೇಳಿದೆ.

ಟೆಂಡರ್ ಪ್ರಕ್ರಿಯೆಯ ವಿಳಂಬದ ಹೆಸರಿನಲ್ಲಿ ಕಾರ್ಮಿಕರನ್ನು ಕೆಲಸದಿಂದ ದೂರ ಇಡುವುದು ಹಾಗೂ ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುವುದು ಕಾರ್ಮಿಕ ವಿರೋಧಿ ಕ್ರಮವಾಗಿದೆ ಎಂದು ಸಂಘ ಆರೋಪಿಸಿದೆ.

ಸಂಘದ ಪ್ರಮುಖ ಬೇಡಿಕೆಗಳು: ಬಾಕಿ ಇರುವ ಎಲ್ಲಾ ವೇತನವನ್ನು ತಕ್ಷಣ ಪಾವತಿಸಬೇಕು, ಕಾರ್ಮಿಕ ನ್ಯಾಯಾಲಯ ಮತ್ತು ಸರ್ಕಾರದ ನಿರ್ದೇಶನಗಳನ್ನು ಜಾರಿಗೊಳಿಸಬೇಕು, ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ವೇತನ ವ್ಯತ್ಯಾಸದ ಮೊತ್ತವನ್ನು ಕಾರ್ಮಿಕರ ಖಾತೆಗೆ ಜಮಾ ಮಾಡಬೇಕು, ಕಾರ್ಮಿಕರಿಗೆ ನಿರಂತರ ಕೆಲಸ ಹಾಗೂ ಉದ್ಯೋಗ ಭದ್ರತೆ ನೀಡಬೇಕು,

ಈ ಎಲ್ಲಾ ಬೇಡಿಕೆಗಳನ್ನು ತಕ್ಷಣ ಈಡೇರಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ತುಂಗಭದ್ರಾ, ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ಎಚ್ಚರಿಸಿದೆ.

ಪ್ರತಿಭಟನಾ ಹೋರಾಟದ ನೇತೃತ್ವವನ್ನು ವಡ್ಡರಹಟ್ಟಿ ಉಪ ವಿಭಾಗದ ಅಧ್ಯಕ್ಷರಾದ ಶರಣಬಸವ ಹೇರೂರು, ಕಾರಟಗಿ ಉಪ ವಿಭಾಗದ ಅಧ್ಯಕ್ಷ ಹುಚ್ಚಯ್ಯ ಸ್ವಾಮಿ ವಹಿಸಿದ್ದರು. ಪ್ರತಿಭಟನೆಯಲ್ಲಿ ಎಐಸಿಸಿಟಿಯು ಜಿಲ್ಲಾಧ್ಯಕ್ಷ ವಿಜಯ್ ದೊರೆರಾಜು ಕಾರ್ಮಿಕರನ್ನುದೇಶಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಲಕ್ಷ್ಮಣ ಸಿಂಗನಾಳ, ಚಾಂದ್ ಪಾಷಾ, ಶಿವುಕುಮಾರ ತಿಪ್ಪನಾಳ, ಸೈಯದ್ ಸಾಬ್, ಗುಂಡಪ್ಪ, ವೀರಯ್ಯ ಸ್ವಾಮಿ, ಶೇಖರ್ ಕಾರಟಗಿ, ಹನುಮಂತಪ್ಪ ಹೂಗಾರ್, ಯಮನಪ್ಪ ಕುಂಟೋಜಿ, ಶರಣಪ್ಪ ಹಣಬಳ ಕ್ಯಾಂಪ್, ಖಾಜಾಸಾಬ್, ಲಕ್ಷ್ಮೀ, ಲಕ್ಷ್ಮಮ್ಮ, ನಾಗಮ್ಮ, ಮೆಹಬೂಬ್ ಸಾಬ್, ನಬಿಸಾಬ್, ವೆಂಕಟೇಶ್ ಸೇರಿದಂತೆ ವಡ್ಡರಹಟ್ಟಿ ಮತ್ತು ಕಾರಟಗಿ ಉಪ ವಿಭಾಗದ ಕಾರ್ಮಿಕರು ಪಾಲ್ಗೊಂಡಿದ್ದರು.

ಮನವಿ ಪತ್ರವನ್ನು ಕಾರ್ಯಪಾಲಕ ಅಭಿಯಂತರರಾದ ಎಂ.ಎಸ್ ಗೋಡೆಕರ್ ಅವರಿಗೆ ಸಲ್ಲಿಸಿ ಏಪ್ರಿಲ್ 10 ರೊಳಗೆ ಲಿಖಿತ ಪತ್ರ ನೀಡುವಂತೆ ಒತ್ತಾಯಿಸಲಾಯಿತು.

## ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಖಾಲಿ ಇರುವ ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿಗೆ ಅರ್ಜಿ ಆಹ್ವಾನ

**ಯಾದಗಿರಿ,** ರಾಷ್ಟ್ರಿಥಯ ಆರೋಗ್ಯ ಅಭಿಯಾನದಡಿ ಖಾಲಿ ಇರುವ ಗುತ್ತಿಗೆ ಆಧಾರದ ಸಿಬ್ಬಂದಿಗಳ ನೇಮಕಾತಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯಾದಗಿರಿ ಜಿಲ್ಲೆಯ ವ್ಯಾಪ್ತಿಯ ರಾಷ್ಟಿಥಯ ಆರೋಗ್ಯ ಅಭಿಯಾನದಡಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ರಾಷ್ಟಿಥಯ ಆರೋಗ್ಯ ಅಭಿಯಾನದ ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ಭರ್ತಿಮಾಡಲಾಗುತ್ತಿದ್ದು,

ಅರ್ಹ ಅಭ್ಯರ್ಥಿಗಳು ಆನ್‌ಲೈನ್ yadgiri. nic. in ನಲ್ಲಿ 2026ರ ಮೇ 20ರ ಒಳಗೆ ಅರ್ಜಿಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳು ನೇಮಕಾತಿ ಸಂಬಅಧಪಟ್ಟ ಅತೆ ವೆಬ್‌ಸೈಟ್ zpyadgiri. karnataka. gov.in ನಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಾಳಸಂತೆ ಭ್ರಷ್ಟಾಚಾರದ ವಿರುದ್ದ ದೂರು ನೀಡಲು ಹೋದ ಹೊರಾಟಗಾರನ ಮೇಲೆ ಎಫ್ಐಆರ್ ದಾಖಲು

## ಪೋಲಿಸ್ ಇನ್ಸಪೆಕ್ಟರ್ ಸಿಬ್ಬಂದಿ ಮೇಲೆ ಪ್ರತಿ ದೂರು ನೀಡಲು ಮುಂದಾದ ಹೋರಾಟಗಾರ

ಕನ್ನಡ ಮಾತೃ ಭೂಮಿ ವಾರ್ತೆ

**ದೇವನಹಳ್ಳಿ,**ಅಕ್ರಮ ಕಂಬಿ ಸಗಾಣಿಕೆ ಮತ್ತು ಕಾಳಸಂತೆಗೆ ವಾಪಾರಕ್ಕೆ ಸಂಬಂದಿಸಿದಂತೆ ದೂರು ನೀಡಿದರೆ ದೂರು ನೀಡಿದ ವ್ಯಕ್ತಿಯ ಮೇಲೆ ದೌರ್ಜನ್ಯ ಬೆದರಿಕೆ ಆರೋಪದಡಿ ಎಫ್.ಐಆರ್ ದಾಖಲಿಸಿರು ವ ವಿಶ್ವನಾಥಪುರ ಪೋಲಿಸರ ವರ್ತನೆ ಕಾನೂನು ವ್ಯವಸ್ಥೆಯಲ್ಲಿ ನಿಷ್ಪಕ್ಷಪಾತತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ ಎಂದು ಹೋರಾಟಗಾರ ವಕೀಲ ಸಿದ್ದಾರ್ಥ ಕಳವಳ ವ್ಯಕ್ತಪಡಿಸಿದರು.

ದೇವನಹಳ್ಳಿ ಪಟ್ಟಣದ ಪತ್ತಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಅಕ್ರಮ ಕಳ್ಳತನ ವ್ಯಾಪಾರ ಮಾಡುವವರನ್ನು ತಡೆದು ಪೋಲಿಸಿರಿಗೆ ಮಾಹಿತಿ ನೀಡಿದರೆ ಮಾಹಿಇ ನೀಡಿದವರ ಮೇಲೆಯೇಢ ದಂಡಾಸ್ತವೇ ಇಂತಹ ಭ್ರಷ್ಟ ವ್ಯವಸ್ಥೆಯ ವಿರುದ್ದ ನಾವೊಬ್ಬರು ಎಚ್ಚೆತ್ತುಕೊಂಡರೆ ಸಾಲದು ತಾಲೂಕು ಜಿಲ್ಲೆ ರಾಜ್ಯಾದ್ಯಂತ ಎಚ್ಚೆತ್ತುಕೊಂಡು ಸಾಂವಿಧಾನಾತ್ಮಕವಾಗಿ ಸತ್ಯ ಹೇಳುವುದು ಅನ್ಯಾಯ ಅಕ್ರಮ ಬಯಲಿಗೆಳೆಯುವವರ ಮೇಲೆ ವ್ಯವಸ್ಥಿತವಾಗಿ ಸುಲ್ಳು ಆರೋಪಗಳನ್ನು ಹೊರಿಸಿ ತಮ್ಮ ಪೊಲೀಸ್ ಅಧಿಕಾರ ದುರ್ಬಳಕೆ ಮಾಡಿಕೊಂಡು ದಂಡಾಸ್ತ ಪ್ರಯೋಗಿಸುವುದರ ವಿರುದ್ಧ ಹೋರಾಡಲು ಸಿದ್ದರಾಗಬೇಕಿದೆ ಎಂದರು.



ದೂರುದಾರ ಹೋರಾಟಗಾರ ಕೆಆರ್ಎಸ್ ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಎಂ. ನಿಖಿಲ್ ಮಾತನಾಡಿ, ನಾನೂ ಒಬ್ಬ ವಕೀಲನಾಗಿದ್ದು ನನಗೆ ಕೆ.ಆರ.ಎಸ್ ಪಕ್ಷದಲ್ಲಿ ಸೇರುವುದಕ್ಕೂ ಮುಂಚಿನಿಅದಲೂ ಭಷ್ಟಾಚಾರ ಅಕ್ರಮದ ವಿರುದ್ದ ಧ್ವಿ ಎತ್ತಿ ಹೊರಾಡುವುದು ಅಕ್ರಮ ಬಯಲಿಗೆಳೆಯುವುದು ಮಾಡುತ್ತಿದ್ದೆ ಅದೇ ರೀತಿ ಕಳೆದ ಐದಾರು ವರ್ಷಗಳಿಂದ ಕೆರ್ಆ.ಎಸ್ ಪಕ್ಷದ ಸಿದ್ದಾಂತ ಒಪ್ಪಿ ಪಕ್ಷದಲ್ಲಿದ್ದೆ , ಕಲೆದ ತಿಂಗಳ 6 ರಂದು ನನ್ನ ಗ್ರಾಮ ಆಲೂರು ದುದ್ದನಹಳ್ಳಿ ಪರಿಮಿತಿಯಲ್ಲಿ ಸರ್ಕಾರಕ್ಕೆ ತೆರಿಗೆ ತಪ್ಪಿಸಲು ಅಕ್ರಮವಾಗಿ ಮೋಲ್ಡಿಂಗ್ ಕಂಬಿಗಳಗಳನ್ನು ತಡ ರಾತ್ರಿಯಲ್ಲಿ ಲಾರಿಗಳಲಿ ತಂದು ನಿರ್ಜನ ಬಯಲಿನಲಿ ಅನ್‌ಲೋಡ್ ಮಾಡುತ್ತಿರುವುದು ಕಂಡು ಬಂದು ನಾವು ಈ ಬಗ್ಗೆ ಪೋಲಿಸರಿಗೂ ಮಾಹಿತಿ ನೀಡಿ ಅಕ್ರಮ ಸಂಗ್ರಹಗಾರರನ್ನು ಪ್ರಶ್ನಿಸಿದೆವು ಪೋಲಿಸರು ಬಂದು ವಾಹನ ತಮ್ಮ ವಶಕ್ಕೆ ಪಡೆದುಕೊಂಡು ನಂತರ ಅದರ ಮಾಲಿಕರೊಂದಿಗೆ ಶಾಮೀಲಾಗಿ ರಾತ್ರೋರಾತ್ರಿ ವಾಹನ ಬಿಟ್ಟು ಕಳುಹಿಸಿದ್ದಾರೆ ನಾನು ಈ ಬಗ್ಗೆ ದೂರು ನೀಡಿದೆ ಅದನ್ನು ದಖಳಿಸಿಕೊಲ್ಳದೇ ಬದಲಿಗೆ ಪೋಲಿಸರು ಅಕ್ರಮವಾಗಿ ಕಂಬಿ ದಾಸ್ತಾನು ಮಾಡುತ್ತಿದ್ದವರಿಂದ ನನ್ನ ವಿರುದ್ ಬೆದರಿಕೆ ಹಣಕ್ಕೆ ಬೇಡಿಕೆ ಜೀವಭಯ ಮುಂತಾದ ಆರೊಪ ಹೊರಸಿ ಅವರಿಂದಲೆ ದೂರು ಪಡೆದು ನನ್ನ ಮೇಲೆ ಎಫ್ ಐ ಆರ್ ದಾಖಲಿಸಿ ನನ್ನ ಹೋರಾಟ ಹತ್ತಿಕ್ಕುವ ಪ್ರಯತ್ನದ ಕೆಲಸ ಮಾಡಿದ್ದಾರೆ ಆದರೆ ನಾನು ಇದಕ್ಕೆ ಜಗ್ಗುವುದಿಲ್ಲ ನಾನು ಪೋಲಿಸ್ ಇನ್ಸಪೆಕ್ಟರ್ ಹಾಗೂ ಸಬ್ ಇನ್ಸ್ಪೆಕ್ಟರ್ ವಿರುದ್ದ ಸೀಜ್ ಮಾಡಿದ ವಾಹನಗಳನ್ನು ಬಿಡುಗಡೆ ಮಾಡಿರುವುದು, ನಮ್ಮ ದೂರನ್ನು ಪರಿಗಣಿಸದೇ ಇರುವುದು, ಸುಳ್ಳು ಎಫ್.ಐ.ಆರ್. ದಾಖಲಿಸಿರುವುದು, ಅಕ್ರಮ ಚಟುವಟಿಕೆಯಲಿ ಭಗಿಯಾಗಿರುವವರ ಬಗ್ಗೆ ಈ ಪ್ರಕರಣದ ನಿಷ್ಪಕ್ಷಪಾತ ತನಿಖೆ ಕುರಿತು ಭ್ರಷ್ಟಾಚಾರದ ಅರೋಪದಡಿ ಸ್ಥಳೀಯ ಪೋಲಿಸರ ವಿರುದ್ದ ಎಸ್.ಪಿ. ಐಜಿ ಗೆ ದೂರು ನೀಡಲು ಮುಂದಾಗಿದ್ದೆನೆ ಅಲ್ಲಿ ದೂರು ದಾಖಲಿಸಿಕೊಳ್ಳದೇ ನಿರ್ಲಕ್ಷಿಸಿದರೆ ನಮ್ಮ ಸಹ ಹೋರಾಟಗಾರರ ಜೊತೆಗೂಡಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅನಿಧಿರ್ಷ್ಟಾವಧಿ ಧರಣಿ ನಡೆಸಲಾಗುವುದು ಎಂದರು.

## ಕೊಪ್ಪಳ : ನಗರದ ರಾಜಕಾಲುವೆ ಮುಂಗಾರು ಮಳೆಗೂ ಮುನ್ನ ಸ್ವಚ್ಛಗೊಳಿಸಲು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ

ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,**ನಗರದ ರಾಜಕಾಲುವೆಮುಂಗಾರು ಮಳೆ ಪ್ರಾರಂಭವಾಗುವ ಮುನ್ನ ಸ್ವಚ್ಛಗೊಳಿಸಲು ಆಗ್ರಹಿಸಿ ಜಿಲ್ಲಾಧಿಕಾರಿ ಸುರೇಶ್ ಬಿ. ಇಟ್ನಾಳ ಅವರಿಗೆ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಸೋಮವಾರ ಮನವಿ ಸಲ್ಲಿಸಿ ಮಳೆ ನೀರಿನಿಂದ ಆಗಬಹುದಾದ ಅನಾಹುತಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು.

ಮನವಿಯಲ್ಲಿ ಕೊಪ್ಪಳ ನಗರದ ಪ್ರಮುಖ ಬಡಾವಣೆಗಳಿಂದ ಹಾದುಹೋಗಿರುವ ಮುಖ್ಯ ರಾಜಕಾಲುವೆ ಪ್ರಸ್ತುತ ಗಿಡ'ಗ'ಂಟಿಗ'ಳಿಂದ'. ಪ್ಲಾಸ್ಟಿಕ್ ತ್ಯಾಜ್ಯಗಳಿಂದ ಮತ್ತು ಹೂಳು ತುಂಬಿ ಅಲ್ಲಲ್ಲಿ ಸಂಪೂರ್ಣವಾಗಿ ಮುಚ್ಚಿ ನೀರು ಹರಿಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬಹುತೇಕ ಕಡೆ ರಾಜಕಾಲುವೆ ಆಕ್ರಮಿಸಿಕೊಂಡು ನಿಯಮ ಬಾಹಿರವಾಗಿ ಕಟ್ಟಡಗಳನ್ನು ಕಟ್ಟಲಾಗಿದೆ.

ಈ ಮುಂಚೆ ಹಲವಾರು ಬಾರಿ ಜಿಲ್ಲಾಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಲಾಗಿದ್ದು.ಆದರೂ ಇದುವರೆಗೆ ಕಾಲುವೆಯನ್ನು ಆಕ್ರಮಿಸಿಕೊಂಡಿರುವ ಕಟ್ಟಡಗಳನ್ನು ತೆರವು ಗೊಳಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ನೀರಿನ ಹರಿವಿಗೆ ಅಡ್ಡಿ ಉಂಟಾಗಿ ಮಳೆಗಾಲದಲ್ಲಿ ಸಾಕಷ್ಟು ಸಮಸ್ಯೆಗಳು ಉಂಟಾಗುತ್ತವೆ. ಅತಿ ಶೀಘ್ರದಲ್ಲೇ ಮುಂಗಾರು ಮಳೆ ಪ್ರಾರಂಭವಾಗಲಿದೆ. ನಗರ ಸಭೆಯಲ್ಲಿ ಈ ಹಿಂದೆ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ದಿನಾಂಕ 31/01/2026 ರಂದು ರಾಜ್ ಕಾಲುವೆ ಸ್ವಚ್ಚ ಗೊಳಿಸಲು ಮತ್ತು ನವೀಕರಿಸಲು ಒತ್ತಾಯಿಸಿ ಮನವಿ ಸಲ್ಲಿಸಲಾಗಿತ್ತು.ಆದರೂ ಇನ್ನೂ ವರೆಗೂ ಯಾವ ಕ್ರಮ ಕೈಗೊಳ್ಳಲಿಲ್ಲ. ತಾವು ಗಂಭೀರವಾಗಿ ಪರಿಗಣಿಸಿ ರಾಜಕಾಲುವೆ ಸ್ಥಳ ವೀಕ್ಷಿಸಿ ತಕ್ಷಣ ಅಕ್ರಮಗೊಂಡ ಜಾಗಗಳನ್ನು ತೆರವುಗೊಳಿಸಿ. ಸ್ವಚ್ಚತೆಗೆ ಕ್ರಮ ಕೈಗೊಳ್ಳಲು ಆದೇಶಿಸಲು ಕೋರುತ್ತೇವೆ.

***ಪ್ರತಿ ವರ್ಷದಂತೆ ಈ ಬಾರಿಯೂ ಮಳೆಯ ನೀರು ಸರಾಗವಾಗಿ ಹರಿದು ಹೋಗಲು ಜಾಗವಿಲ್ಲದಿದ್ದರೆ, ಈ ಕೆಳಗಿನ ಸಮಸ್ಯೆಗಳು ಎದುರಾಗುವ ಭೀತಿ ಇದೆ:***
ನಗರ ಪ್ರದೇಶದಲ್ಲಿ ಕೃತಕ ಪ್ರವಾಹ ಸೃಷ್ಟಿ: ರಾಜಕಾಲುವೆ ಗಿಡಗಂಟಿಗಳಿಂದ. ಪ್ಲಾಸ್ಟಿಕ್ ತ್ಯಾಜ್ಯಗಳಿಂದ ಕೊಡಿದ್ದು. ಮಳೆ ನೀರು ರಸ್ತೆಯ ಮೇಲೆ ಹರಿದು ಕೃತಕ ಪ್ರವಾಹ ಸೃಷ್ಟಿಯಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತದೆ.

ಈ ಹಿಂದೆ ಕೆಲವು ಬಾರಿ ಮಳೆ ಬಿದ್ದ ಪರಿಣಾಮ ಮನೆಗಳಿಗೆ ನೀರು ನುಗ್ಗಿ ಅದೆಷ್ಟು ಕುಟುಂಬಗಳು ತೊಂದ್ರೆಗಳನ್ನು ಅನುಭವಿಸಿದ್ದು ಸುದ್ದಿಯಾಗಿದೆ.

ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದು: ರಾಜ್ ಕಾಲುವೆ ಪಕ್ಕದಲ್ಲಿರುವ ಮನೆಗಳಿಗೆ ಮತ್ತು ಅಂಗಡಿ ಮುಂಗಟ್ಟುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಆಸ್ತಿಪಾಸ್ತಿ ಹಾನಿಯಾಗುವ ಸಂಭವವಿದೆ.

ಆರೋಗ್ಯ ಸಮಸ್ಯೆ: ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗಗಳು (ಡೆಂಗ್ಯೂ, ಮಲೇರಿಯಾ) ಹರಡುವ ಸಾಧ್ಯತೆ ಹೆಚ್ಚಿದೆ.

ನಮ್ಮ ವಿನಂತಿ:ಮುನ್ನೆಚ್ಚರಿಕಾ ಕ್ರಮವಾಗಿ, ಮಳೆಗಾಲ ಆರಂಭವಾಗುವ ಮೊದಲೇ ಸಂಬಂಧಪಟ್ಟ ನಗರಸಭೆ ಅಧಿಕಾರಿಗಳಿಗೆ

ಸೂಚನೆ ನೀಡಿ, ತುರ್ತಾಗಿ ಜೆ.ಸಿ.ಬಿ ಮೂಲಕ ರಾಜಕಾಲುವೆಯಲ್ಲಿನ ಗಿಡಗಂಟಿಗಳನ್ನು ತೆರವುಗೊಳಿಸಿ,ಹೂಳು ತೆಗೆಯಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸ್ಥಳೀಯ ಆಡಳಿತವೇ ಹೊಣೆ ಹೊತ್ತು ಸಾರ್ವಜನಿಕರಿಗೆ ಆಗುವ ನಷ್ಟ ಭರಿಸಬೇಕಾಗುತ್ತದೆ.

ತಮ್ಮ ಶೀಘ್ರ ಕ್ರಮವು ನಗರದ ನಾಗರಿಕರ ನೆಮ್ಮದಿಗೆ ಸಹಕಾರಿಯಾಗಲಿದೆ ಎಂದು ನಂಬಿದ್ದೇವೆ ಎಂದು ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್. ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಸಂಚಾಲಕ ಬಸವರಾಜ್ ಶೀಲವರ್ಂತ.ಕೊಳಚೆ ನಿರ್ಮೂಲನಾ ವೇದಿಕೆಯ ಸಂಚಾಲಕ ಮಖಬೂಲ್ ರಾಯಚೂರು.ದಲಿತ ಯುವ ವೇದಿಕೆಯ ಜಿಲ್ಲಾ ಸಂಚಾಲಕ ಸುಂಕಪ್ಪ ಮೀಸಿ. ಮುಖಂಡ ಶಿವಪ್ಪ ಹಡಪದ್ ಮುಂತಾದವರು ಮನವಿ ಮೂಲಕ ಕೋರಿದರು.

# ಸೇವಾ ಮನೋಭಾವ ಬೆಳೆಸಿದರೆ ಜೀವನ ಸಾರ್ಥಕ ದೇಶ ಸೇವೆಯೇ ಮಾನವ ಧರ್ಮದ ಶಿಖರ ಶಿವಾಚಾರ್ಯರು

ಕನ್ನಡ ಮಾತೃ ಭೂಮಿ ವಾರ್ತೆ



**ಕಮಲನಗರ,** ಮಾನವ ಜೀವನದಲ್ಲಿ ಸೇವಾ ಮನೋಭಾವದ ಮಹತ್ವವನ್ನು ಸಾರುವ ಅಪೂರ್ವ ಸಮಾರಂಭವೊಂದು ತಾಲ್ಲೂಕಿನ ಡೋಣಗಾಂವ (ಎಂ) ಗ್ರಾಮದಲ್ಲಿ ಭಾನುವಾರ ಭವ್ಯವಾಗಿ ನೆರವೇರಿತು. ಗ್ರಾಮೀಣ ಸೌಹಾರ್ದ, ಭಕ್ತಿ ಮತ್ತು ಗೌರವದ ವಾತಾವರಣದಲ್ಲಿ ನಡೆದ ಈ ಕಾರ್ಯಕ್ರಮವು ಎಲ್ಲರ ಗಮನ ಸೆಳೆಯಿತು.

ಡೋಣಗಾಂವ (ಎಂ) ಗ್ರಾಮದ ಹನುಮಾನ ದೇವಾಲಯದ ಪಿ.ಕೆ.ಪಿ.ಎಸ್ ಆವರಣದಲ್ಲಿ ಮಲ್ಲಿಕಾರ್ಜುನ ಹೊಂಡಾಳೆ ಯವರ ಸೇವಾ ನಿವೃತ್ತಿ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಗ್ರಾಮಸ್ಥರು, ಮುಖಂಡರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶಿಷ್ಟ ಮೆರುಗು ನೀಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಶ್ರೀ ಶ್ರೀ 108 ಷ.ಬ್ರ ಡಾ|| ಶಂಭುಲಿಂಗ ಶಿವಾಚಾರ್ಯರು ತಮ್ಮ ಆಶೀರ್ವಚನದಲ್ಲಿ ಮಾತನಾಡಿ, ಜೀವನದಲ್ಲಿ ಸೇವಾ ಮನೋಭಾವ ಎನ್ನುವುದು ಅತ್ಯಂತ ಮೂಲಭೂತ ಮೌಲ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಸೇವೆಯ ಗುಣವನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಸೌಹಾರ್ದ, ಪ್ರೀತಿ ಮತ್ತು ಶಾಂತಿ ನೆಲೆಸುತ್ತದೆ ಎಂದು ಹೇಳಿದರು.

ಅವರು ಮುಂದುವರೆದು, ನಾವು ದುಡಿದು ತಿನ್ನುವ ಅನ್ನದ ಬೆಲೆ ತಿಳಿದಾಗ ಮಾತ್ರ ಜೀವನದ ನಿಜವಾದ ಅರ್ಥ ಗೊತ್ತಾಗುತ್ತದೆ. ಕಷ್ಟಪಟ್ಟು ಗಳಿಸಿದ ಸಂಪಾದನೆ ಮತ್ತು ದೇಶ ಸೇವೆಯ ಭಕ್ತಿ ಎಂದಿಗೂ ವ್ಯರ್ಥವಾಗುವುದಿಲ್ಲ. ದೇಶಕ್ಕಾಗಿ, ಸಮಾಜಕ್ಕಾಗಿ ಸೇವೆ ಸಲ್ಲಿಸುವ ಮನೋಭಾವ ಪ್ರತಿಯೊಬ್ಬ ಯುವಕರಲ್ಲೂ ಬೆಳೆಸಿಕೊಳ್ಳಬೇಕು. ಇಂತಹ ಕಾರ್ಯಕ್ರಮಗಳು ಯುವಜನತೆಗೆ ದಾರಿ ತೋರಿಸುವ ದೀಪಸ್ತಂಭಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಇದಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಸೇವಾ ಮನೋಭಾವ ಬೆಳೆಸುವ ಮೂಲಕ ಸಮಾಜದಲ್ಲಿ ಉತ್ತಮ ಬದಲಾವಣೆ ತರಬಹುದು ಎಂದು ತಿಳಿಸಿದ ಅವರು, ಸೇವಾ ಕಾರ್ಯಗಳಿಗೆ ಗೌರವ ಸಲ್ಲಿಸು ವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ಡಾ|| ಭೀಮಸೇನರಾವ ಶಿಂಥೆ ಅವರು, ದೇಶ ಸೇವೆ ಮಾಡುವ ಜೊತೆಗೆ ನಮ್ಮ ಸುತ್ತಮುತ್ತಲಿನ ಜನರೊಂದಿಗೆ ಪ್ರೀತಿ, ಸಹಕಾರ ಮತ್ತು ಏಕತೆಯಿಂದ ಬದುಕುವುದು ಕೂಡ ಅತ್ಯಂತ ಮುಖ್ಯವಾಗಿದೆ. ಸಮಾಜದಲ್ಲಿ ಮಾನವೀಯ ಮೌಲ್ಯಗಳು ಉಳಿಯಬೇಕಾದರೆ ಪರಸ್ಪರ ಸಹಕಾರ ಮತ್ತು ಸೇವಾ ಮನೋಭಾವ ಅವಶ್ಯಕ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ನಿವೃತ್ತ ಮುಖ್ಯ ಗುರುಗಳಾದ ಶಾಲಿವಾನ ಗಂದಗೆ ಅವರು, ಮಲ್ಲಿಕಾರ್ಜುನ ಹೊಂಡಾಳೆಯವರ ಸೇವಾ ಜೀವನದ ವಿವಿಧ ಆಯಾಮಗಳನ್ನು ವಿವರಿಸಿ, ಅವರ ನಿಷ್ಠೆ, ಪರಿಶ್ರಮ ಮತ್ತು ಸಮಾಜಪರ ಕಾರ್ಯಗಳನ್ನು ಸ್ಮರಿಸಿದರು.

ಅವರು ತಮ್ಮ ಸೇವಾ ಅವಧಿಯಲ್ಲಿ ಸಮಾಜಕ್ಕೆ ನೀಡಿದ ಕೊಡುಗೆಗಳು ಶ್ಲಾಘನೀಯವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಕಾಶ್ ಸರ್ ಅವರು ಮಾತನಾಡಿ, ಈ ಗ್ರಾಮವು ಪ್ರತಿಭೆಗಳನ್ನು ಗುರುತಿಸಿ ಗೌರವಿಸುವ ಪರಂಪರೆ ಹೊಂದಿದೆ. ಮಲ್ಲಿಕಾರ್ಜುನ ಹೊಂಡಾಳೆಯವರಂತಹ ವ್ಯಕ್ತಿಗಳು ನಮ್ಮ ಗ್ರಾಮದ ಹೆಮ್ಮೆಯ ಸಂಕೇತಗಳು. ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಉತ್ತಮ ಸಂದೇಶವನ್ನು ಹರಡುತ್ತವೆ ಎಂದು ಹೇಳಿದರು.

ಪತ್ರಕರ್ತ ಪ್ರವೀಣ ಹೊಂಡಾಳೆ ಅವರು ನಿಖರವಾಗಿ ಹಾಗೂ ಸರಾಗವಾಗಿ ನಿರೂಪಿಸಿದರು. ಸಮಾರಂಭದಲ್ಲಿ ಹೊಂಡಾಳೆಯವರ ಸೇವೆಯನ್ನು ಸ್ಮರಿಸಿ ಗೌರವ ಸಮರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರು ಭಾವನಾತ್ಮಕವಾಗಿ ಅವರ ಸೇವಾ ಪಯಣವನ್ನು ಕೊಂಡಾಡಿದರು.

ಈ ಸಂದರ್ಭದಲ್ಲಿ ಶಿವಕುಮಾರ್ ಘಾಟೆ, ಗೌಳಿ ಸರ್, ಮೌಲಿನ್ ಖಾನ್, ಅಪ್ಪಾಸಾಬ ದೇಶಮುಖ್, ವಿಜಯಕುಮಾರ್ ದೇಶಮುಖ್, ಶೈಲೇಶ್ ದೇಶಮುಖ್, ಮಹಾಳಪ್ಪ ದೇಶಮುಖ್ ಸೇರಿದಂತೆ ಹಲವಾರು ಗಣ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಒಟ್ಟಾರೆ, ಈ ಕಾರ್ಯಕ್ರಮವು ಸೇವಾ ಮನೋಭಾವ, ದೇಶಭಕ್ತಿ ಮತ್ತು ಮಾನವೀಯ ಮೌಲ್ಯಗಳ ಮಹತ್ವವನ್ನು ಪುನರುಚ್ಚರಿಸುವ ಮೂಲಕ ಯುವಜನತೆಗೆ ಪ್ರೇರಣೆಯ ಕಿರಣವಾಗಿ ಪರಿಣಮಿಸಿತು.

# ಕಾಡಿಗೆ ಸಿಂಹ ರಾಜವಾದರೆ, ದೇಶಕ್ಕೆ ಬಿಜೆಪಿ ಪಕ್ಷವೆ ರಾಜ: ಖೂಬಾ

ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ್,** ಪಂಚರಾಜ್ಯಗಳ ಚುನಾವಣೆಯಲ್ಲಿ ಜನತೆಯೂ ಭಾರತೀಯ ಜನತಾ ಪಕ್ಷಕ್ಕೆ ಬೆಂಬಲಿಸಿ, ಮೋದಿಜೀಯವರ ಮೇಲೆ ವಿಶ್ವಾಸವಿಟ್ಟು, ಪಾಕಿಸ್ಥಾನ, ಬಾಂಗ್ಲಾದೇಶಿ ಯವರಿಗೆ ಸಹಕರಿಸುತ್ತಿದ್ದ ದೇಶದ್ರೋಹಿ ಗಳಿಗೆ ಅಧಿಕಾರದಿಂದ ದೂರವಿಟ್ಟು ತಕ್ಕ ಪಾಠ ಕಲಿಸಿದ್ದಾರೆ ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಅವರು ತಿಳಿಸಿದ್ದಾರೆ.



ಶೇಕಡಾ 33ರಷ್ಟು ಮಹಿಳಾ ಮೀಸಲಾತಿ ವಿರೋಧಿಸಿದ್ದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳಿಗೆ ಜನರು ಬುದ್ದಿ ಕಲಿಸಿದ್ದಾರೆ, ಪಶ್ಚಿಮ್ ಬಂಗಾಳ, ಪುದುಚೇರಿ, ಆಸ್ಸಾಂ ರಾಜ್ಯಗಳಲ್ಲಿ ಪೂರ್ಣ ಬಹುಮತ ಪಡೆಯುವುದರ ಜೊತೆಗೆ, ಕೇರಳ ಮತ್ತು ತಮಿಳುನಾಡಿನಲ್ಲೂ ನಮ್ಮ ಪಕ್ಷ ನೀರಿಕ್ಷೆಗೂ ಮೀರಿ ಜನಬೆಂಬಲ ಪಡೆದಿದೆ, ಮುಂದಿನ ದಿನಗಳಲ್ಲಿ ಈ ರಾಜ್ಯದಲ್ಲೂ ಇನ್ನು ಹೆಚ್ಚಿನ ಸ್ಥಾನಗಳು ಪಡೆದುಕೊಳ್ಳುತ್ತೆವೆ, ಒಟ್ಟಿನಲ್ಲಿ ಬಿಜೆಪಿ ಪಕ್ಷ ಏಕಾಂಗಿಯಾಗಿ ದೇಶದೆಲ್ಲೆಡೆ ತನ್ನ ಸಾಮರ್ಥ್ಯ ಸಾಬಿತುಪಡಿಸಿದೆ, ಜನತೆಯ ಬೆಂಬಲ ನಮ್ಮ ಪಕ್ಷದ ಜೊತೆಯಿದೆ ಎಂಬುದು ಮತ್ತೊಮ್ಮೆ ಸಾಬಿತಾಗಿದ್ದು, ಜನರು ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣವಾಗಿ ಮರೆತಿರುವುದು ಈ ಪಂಚರಾಜ್ಯಗಳ ಫಲಿತಾಂಶದಿಂದ ಗೊತ್ತಾಗುತ್ತಿದೆ ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ದೇಶದ ಸುರಕ್ಷತೆಗೆ ಸಂಬಂದಿಸಿದಂತೆ ಪಶ್ಚಿಮ್ ಬಂಗಾಳದಲ್ಲಿ ಬಿಜೆಪಿ ಗೆಲುವು ಅತಿ ಅಗತ್ಯವಾಗಿತ್ತು, ಬಾಂಗ್ಲಾದೇಶಿಯರಿಂದ, ರೋಹಿಂಗ್ಯಾಗಳಿಂದ ಅಮಾಯಕ ಪಶ್ಚಿಮ್ ಬಂಗಾಳಿಯರನ್ನು ರಕ್ಷಿಸಬೇಕಾಗಿತ್ತು, ಈ ನಿಟ್ಟಿನಲ್ಲಿ ಈ ಬಾರಿ ಪಶ್ಚೀಮ್ ಬಂಗಾಳದಲ್ಲಿ ನಮ್ಮ ಪಕ್ಷ ಗೆದ್ದಿರುವುದು ಹೆಮ್ಮೆಯ ಸಂಗತಿಯಾಗಿದೆ ಹಾಗೂ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಡಾ.ಶ್ಯಾಮ ಪ್ರಸಾದ ಮುಖರ್ಜಿಯವರು ಹುಟ್ಟಿ ಬೆಳೆದ ನಾಡಲ್ಲಿ ಪಕ್ಷವು ಅಧಿಕಾರಕ್ಕೆ ಬಂದಿದೆ ಎಂದು ಅವರು ಸಂತೋಷ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದ ಆಡಳಿತ ಮರೆತು, ಸ್ವತಃ ಮುಖ್ಯಮಂತ್ರಿ ಮತ್ತು ಸಂಪೂರ್ಣ ಕ್ಯಾಬಿನೆಟ್ ಸಚಿವರು ಪ್ರಚಾರ ಮಾಡಿದ್ದರು ಜೊತೆಗೆ ಕೋಟಿ ಕೋಟಿ ಹಣ ಸುರಿದು ಈ ಎರಡು ಸ್ಥಾನಗಳು ಗೆದ್ದಿದೆ, ಇದು ರಾಜ್ಯದ ಜನರಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಇರುವ ತಿರಸ್ಕಾರ ಭಾವನೆ ಮೂಡಿರುವುದು ಈ ಉಪಚುನಾವಣೆಯಿಂದ ಸ್ಪಷ್ಟವಾಗಿದೆ, ಇದು 2028ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿದೆ ಎನ್ನುವ ಮುನ್ಸೂಚನೆ ನೀಡುತ್ತಿವೆ ಎಂದು ಖೂಬಾ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಅಭೂತಪೂರ್ವ ಸಾಧನೆ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮೀತ ಶಾ, ರಾಷ್ಟ್ರೀಯ ಅಧ್ಯಕ್ಷ ನೀತಿನ ನಬೀನ್‌ಜೀ ಅವರಿಗೆ ಮತ್ತು ಎಲ್ಲ ಸಂಘಟನೆಯ ಹಿರಿಯರಿಗೆ, ಕಾರ್ಯಕರ್ತರಿಗೆ ಅವರು ಅಭಿನಂದಿಸಿದ್ದಾರೆ.

# 55 ಮೀ. ಎತ್ತರದ ಇಷ್ಟಲಿಂಗ : ಬಸವ ಕಲ್ಯಾಣದಲ್ಲಿ ಭಕ್ತಿ ವಿಜ್ಞಾನದ ಮಹಾಸಂಗಮ

## ಮಾರ್ಚೊಳಗೆ ಅನುಭವ ಮಂಟಪ ಲೋಕಾರ್ಪಣೆ ಸಚಿವ ಈಶ್ವರ ಖಂಡ್ರೆ



ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ,** ಭಕ್ತಿ, ದಾರ್ಶನಿಕತೆ ಮತ್ತು ಆಧುನಿಕ ವಿಜ್ಞಾನಗಳ ಅದ್ಭುತ ಸಂಗಮವಾಗಲಿರುವ ಬಸವಕಲ್ಯಾಣದ ಅನುಭವ ಮಂಟಪ ಕಾಮಗಾರಿ ಹೊಸ ವೇಗ ಪಡೆದುಕೊಂಡಿದ್ದು, ವಿಶ್ವದ ಅತೀ ಎತ್ತರದ (55 ಮೀ.) ಇಷ್ಟಲಿಂಗ ನಿರ್ಮಾಣ ಜನರ ಕುತೂಹಲವನ್ನು ಹೆಚ್ಚಿಸಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ಇಂದು ಸ್ಥಳಕ್ಕೆ ಭೇಟಿ ನೀಡಿ ಇಷ್ಟಲಿಂಗಕ್ಕೆ ಪೂಜೆ ಸಲ್ಲಿಸಿ ಕಾಮಗಾರಿಯನ್ನು ಸಮಗ್ರವಾಗಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಸವಾದಿ ಶರಣರು ಜಗತ್ತಿಗೆ ಮಾನವೀಯ ಮೌಲ್ಯಗಳ ದಾರಿದೀಪರು. ಕಾಯಕವೇ ಕೈಲಾಸ ಎಂಬ ತತ್ವವನ್ನು ಪ್ರತಿಪಾದಿಸಿ, ಪ್ರಜಾಪ್ರಭುತ್ವದ ಮೊದಲ ಪರಿಕಲ್ಪನೆಯನ್ನು ನೀಡಿದ ಮಹಾನ್ ದಾರ್ಶನಿಕರು. ಅವರ ಚಿಂತನೆಗಳು ಇಂದಿಗೂ ಸಮಕಾಲೀನವಾಗಿವೆ ಎಂದು ಹೇಳಿದರು.

ಅವರು ಮುಂದುವರೆದು, ಅನುಭವ ಮಂಟಪವನ್ನು ಕೇವಲ ಸ್ಮಾರಕವನ್ನಾಗಿ ಮಾತ್ರವಲ್ಲ, ಜ್ಞಾನ ಮತ್ತು ಚಿಂತನೆಯ ಕೇಂದ್ರವನ್ನಾಗಿ ರೂಪಿಸಲಾಗುತ್ತಿದೆ ಎಂದರು. 770 ಕಂಬಗಳ ಮೇಲೆ 770 ಶರಣರ ವಚನಗಳನ್ನು ಕೆತ್ತಲಾಗುತ್ತಿದ್ದು, ಇದು ಭವಿಷ್ಯ ಪೀಳಿಗೆಗೆ ಶಾಶ್ವತ ಪ್ರೇರಣೆಯಾಗಲಿದೆ. ವೈಜ್ಞಾನಿಕ ನೆಲೆಯಲ್ಲಿ ಮನಶಾಂತಿ ನೀಡುವ ಇಷ್ಟಲಿಂಗ ತರಬೇತಿ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ ಎಂದು ವಿವರಿಸಿದರು.

ಇದೇ ವೇಳೆ, ಐಐಟಿ ವಿಜ್ಞಾನಿಗಳ ಸಹಕಾರದಿಂದ ಶರಣರ ವೈಚಾರಿಕ ವಚನಗಳನ್ನು ಆಧುನಿಕ ತಂತ್ರಜ್ಞಾನ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು. ಇದು ಕೇವಲ ಧಾರ್ಮಿಕ ಕೇಂದ್ರವಲ್ಲ, ಜ್ಞಾನತಂತ್ರಜ್ಞಾನಗಳ ಸಂಯೋಜನೆಯಿಂದ ಬದುಕನ್ನು ಹಸನಗೊಳಿಸುವ ಕೇಂದ್ರವಾಗಲಿದೆ ಎಂದು ಹೇಳಿದರು.

ಶರಣರ ಜೀವನ ಮೌಲ್ಯಗಳನ್ನು ಜೀವಂತವಾಗಿ ಪ್ರತಿಬಿಂಬಿಸುವ ಶರಣ ಗ್ರಾಮವೂ ನಿರ್ಮಾಣವಾಗುತ್ತಿದ್ದು, ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕೇಂದ್ರವನ್ನು ಕೂಡ ಆರಂಭಿಸಲಾಗುವುದು. ವೃತ್ತಿಯಲ್ಲಿ ಯಾವುದು ಮೇಲಿಲ್ಲ, ಯಾವುದು ಕೀಳಿಲ್ಲ ಎಂಬ ಶರಣರ ಸಂದೇಶವನ್ನು ಯುವಜನತೆಗೆ ತಲುಪಿಸಲಾಗುವುದು ಎಂದು ಖಂಡ್ರೆ ಹೇಳಿದರು.

ಅನುಭವ ಮಂಟಪ ಕಾಮಗಾರಿಗೆ ಹಣದ ಕೊರತೆ ಇಲ್ಲವೆಂದು ಸ್ಪಷ್ಟಪಡಿಸಿದ ಅವರು, ಈವರೆಗೆ ಸುಮಾರು 480 ಕೋಟಿ ರೂ. ವೆಚ್ಚವಾಗಿದೆ. ನಮ್ಮ ಮುಖ್ಯಮಂತ್ರಿಗಳು 280 ಕೋಟಿ ರೂ. ಅನುದಾನ ನೀಡಿದ್ದಾರೆ. ಉಳಿದ ಹಣವನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಮುಂದಿನ ಮಾರ್ಚ್ ಒಳಗಾಗಿ ಅನುಭವ ಮಂಟಪವನ್ನು ಲೋಕಾರ್ಪಣೆ ಮಾಡುವ ಗುರಿ ಹೊಂದಲಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಅನುಭವ ಮಂಟಪದ ಸಂಯೋಜಕ ಡಾ. ಬಾಬಾಸಾಹೇಬ್ ಗಡ್ಡೆ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಒಟ್ಟಾರೆ, ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಈ ಮಹತ್ವಾಕಾಂಕ್ಷಿ ಯೋಜನೆ ಭಕ್ತಿ, ಸಂಸ್ಕೃತಿ ಮತ್ತು ಆಧುನಿಕತೆಯ ಸೇತುವೆಯಾಗಿ ರೂಪುಗೊಳ್ಳುತ್ತಿದ್ದು, ರಾಜ್ಯದ ಹೆಮ್ಮೆಯ ಕೇಂದ್ರವಾಗಲು ಸಜ್ಜಾಗಿದೆ.

# ನೀರಿಗೆ ಅಡ್ಡಿಯಾದರೆ ಕಠಿಣ ಕ್ರಮ: ಬೇಸಿಗೆಯಲ್ಲಿ ಜನರ ದಾಹ ತೀರಿಸುವುದು ಸರ್ಕಾರದ ಮೊದಲ ಕರ್ತವ್ಯ ಸಚಿವ ಈಶ್ವರ ಖಂಡ್ರೆ

ಕನ್ನಡ ಮಾತೃ ಭೂಮಿ ವಾರ್ತೆ



**ಬೀದರ,** ಬೇಸಿಗೆಯ ತೀವ್ರತೆಯ ನಡುವೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಉಲ್ಬಣಗೊಳ್ಳುತ್ತಿರುವ ಕುಡಿಯುವ ನೀರಿನ ಸಮಸ್ಯೆ ಕುರಿತು ಗಂಭೀರ ಚರ್ಚೆ ನಡೆದಿದ್ದು, ನೀರು ಸರಬರಾಜಿಗೆ ಅಡ್ಡಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಅನುದಾನದಿಂದ ಖಾಸಗಿ ಜಮೀನಿನಲ್ಲಿ ಕೊರೆಯಿಸಿದ ಕೊಳವೆ ಬಾವಿ ಅಥವಾ ತೆರೆದ ಬಾವಿಗಳಿಂದ ನೀರು ಸರಬರಾಜು ಮಾಡುವ ವೇಳೆ ಕೆಲವರು ಅಡ್ಡಿ ಉಂಟು ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಇಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಪ್ರಕರಣ ದಾಖಲಿಸಬೇಕು ಎಂದು ಹೇಳಿದರು. ಯಾರು ಎಷ್ಟೇ ಪ್ರಭಾವಿಗಳು ಆಗಿದ್ದರೂ ಜನರಿಗೆ ನೀರು ತಲುಪಿಸಲು ಅಡ್ಡಿಯಾದರೆ ಕಾನೂನು ಕ್ರಮ ತಪ್ಪದೇ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯ ಔರಾದ್, ಭಾಲ್ಕಿ, ಬಸವಕಲ್ಯಾಣ ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿ ಕಾಣಿಸಿಕೊಂಡಿದೆ. ಔರಾದ್‌ನಲ್ಲಿ 14, ಕಮಲನಗರದಲ್ಲಿ 11, ಬಸವಕಲ್ಯಾಣದಲ್ಲಿ 10 ಹಾಗೂ ಭಾಲ್ಕಿಯಲ್ಲಿ 8 ಗ್ರಾಮಗಳು ಸೇರಿದಂತೆ ಒಟ್ಟು 43 ಗ್ರಾಮಗಳಲ್ಲಿ ಸಮಸ್ಯೆ ಉಲ್ಬಣ ಗೊಂಡಿದೆ. ಮೇ ತಿಂಗಳ ಅಂತ್ಯದವರೆಗೆ ಈ ಸಮಸ್ಯೆ ಇನ್ನಷ್ಟು ತೀವ್ರವಾಗುವ ಸಾಧ್ಯತೆ ಇರುವುದರಿಂದ ಅಧಿಕಾರಿಗಳು ಟ್ಯಾಂಕರ್ ಮೂಲಕ ನಿರಂತರ ನೀರು ಸರಬರಾಜು ಮಾಡುವಂತೆ ಸೂಚಿಸಿದರು.

ತೀರ ಅಗತ್ಯವಿದ್ದಲ್ಲಿ ಮಾತ್ರ ಹೊಸ ಕೊಳವೆಬಾವಿ ಕೊರೆಯಬೇಕು ಎಂದು ತಿಳಿಸಿದ ಅವರು, ಔರಾದ್ ತಾಲ್ಲೂಕಿನ ತಾಂಡಾಗಳಲ್ಲಿ ನೀರಿನ ಮಟ್ಟ 700ರಿಂದ 800 ಅಡಿವರೆಗೆ ಕುಸಿದಿರುವುದನ್ನು ಉಲ್ಲೇಖಿಸಿದರು.

ಫ್ಲಶಿಂಗ್ ಹಾಗೂ ಡೀಪನಿಂಗ್ ಮೂಲಕ ಹಳೆಯ ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸುವ ಕಾರ್ಯ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಸಮಸ್ಯಾತ್ಮಕ ಗ್ರಾಮಗಳಲ್ಲಿ ನೀರಿನ ಸರಬರಾಜು ಮೇಲ್ವಿಚಾರಣೆಗೆ ಸ್ಥಳೀಯ ತಹಸೀಲ್ದಾರರು, ತಾಲ್ಲೂಕು ಪಂಚಾಯತ್ ಇಒ, ಪಿಡಿಒ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಪ್ರತಿದಿನ ಬೆಳಿಗ್ಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಬೇಕು ಎಂದು ಸೂಚಿಸಿದರು. ಮೋಟಾರುಗಳನ್ನು ನೇರವಾಗಿ ಹಚ್ಚಿಕೊಂಡು ಅನಧಿಕೃತವಾಗಿ ನೀರು ಪಡೆಯುವವರ ಸಂಪರ್ಕ ಕಡಿತಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಗ್ರಾಮಗಳ ಅವಶ್ಯಕತೆಗನುಗುಣವಾಗಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದು, ಅದರ ಬಿಲ್ಲುಗಳನ್ನು ಸಕಾಲದಲ್ಲಿ ಪಾವತಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಾನುವಾರುಗಳಿಗಾಗಿ ಮೇವಿನ ಕೊರತೆ ಇಲ್ಲದಿದ್ದು, ಮುಂದಿನ 24 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿದೆ ಎಂದು ತಿಳಿಸಿದರು.

ಜೊತೆಗೆ ಕಾರಂಜಾ ಮತ್ತು ಚುಳಕಿ ಜಲಾಶಯಗಳಿಂದ ನೀರು ಬಿಡುವ ಮೂಲಕ ಪಶುಗಳಿಗೆ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮುಂಗಾರು ಹಂಗಾಮಿಗೆ ಸಿದ್ಧತೆ ಕುರಿತೂ ಚರ್ಚಿಸಿದ ಸಚಿವರು, ರೈತರಿಗೆ ಬೀಜ ಮತ್ತು ರಸಗೊಬ್ಬರಗಳ ಕೊರತೆಯಾಗದಂತೆ ಈಗಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ ಬದೋಲೆ, ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಸೇರಿದಂತೆ ಹಲವು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಒಟ್ಟಾರೆ, ಜನರಿಗೆ ಕುಡಿಯುವ ನೀರು ನಿರಂತರವಾಗಿ ಲಭ್ಯವಾಗುವಂತೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದ್ದು, ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಲ್ಲಿ ತ್ವರಿತ ಪರಿಹಾರ ಕ್ರಮಗಳನ್ನು ಜಾರಿಗೆ ತರಲು ಸೂಚನೆ ನೀಡಲಾಗಿದೆ.

# ರುದ್ಯೋಗಿಗಳಿಗೆ ಆಸರೆಯಾದ ಬೀದಿ ಬದಿ ಕಂಪ್ಯೂಟರ ಅಂಗಡಿಗಳನ್ನು ತೆರವುಗೊಳಿಸದಂತೆ ವಿದ್ಯಾವಂತ ನಿರುದ್ಯೋಗಿಗಳ ಮನವಿ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರು,** ಪಟ್ಟಣದ ಪುರಸಭೆ ವ್ಯಾಪ್ತಿಗೊಳ ಪಡುವ ರಸ್ತೆಯ ಪಕ್ಕದಲ್ಲಿ ಬೀದಿ ಬದಿ ಕಂಪ್ಯೂಟರ ಹಾಕಿ ಜೀವನ ಸಾಗಿಸುತ್ತಿರುವ ನಿರುದ್ಯೋಗಿಗಳ ಅಂಗಡಿಗಳನ್ನು ತೆರವುಗೊಳಿಸುವಂತೆ ಪುರಸಭೆಯ ಅಧಿಕಾರಿಗಳು ನೋಟಿಸ್ ನೀಡಲಾಗಿದ್ದು ಇದರಿಂದಾಗಿ ನಿರುದ್ಯೋಗಿಗಳಿಗೆ ತುಂಬಾ ತೊಂದರೆಯಾಗಿದ್ದು ಕೂಡಲೇ ತಾವು ಬಡ ನಿರುದ್ಯೋಗಿಗಳ ಕಂಪ್ಯೂಟರ್ ಅಂಗಡಿಗಳನ್ನು ತೆರವುಗೊಳಿಸದಂತೆ ಕ್ರಮ ಕೈಗೊಳ್ಳಬೇಕೆಂದು ನಿರುದ್ಯೋಗಿ ಕಂಪ್ಯೂಟರ್ ಅಂಗಡಿ ವ್ಯಾಪಾರಸ್ಥರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ನಾವು ವಿದ್ಯಾವಂತ ನಿರುದ್ಯೋಗಿಗಳಾಗಿದ್ದು, ನಮ್ಮ ಕುಟುಂಬ ನಿರ್ವಹಣೆಯ ಸಲುವಾಗಿ ಲಿಂಗಸಗೂರಿನ ಪುರಸಭೆ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 20-25ವರ್ಷಗಳಿಂದ ಕಂಪ್ಯೂಟರ್ ಅಂಗಡಿಯನ್ನು ಇಟ್ಟುಕೊಂಡು ನಮ್ಮ ಕುಟುಂಬ ನಿರ್ವಹಣೆಯನ್ನು ಮಾಡುತ್ತಾ ಬಂದಿರುತ್ತೇವೆ.



ಮತ್ತು ನಮಗೆ ಪುರಸಭೆಯಿಂದ ಬೀದಿ ಬದಿ ವ್ಯಾಪಾರಿಗಳ ಗುರುತಿನ ಪತ್ರವನ್ನು ನೀಡಿ ಪುರಸಭೆಯಿಂದ ಕೇಂದ್ರ ಸರಕಾರದಿಂದ ವಿದ್ಯಾವಂತ ನಿರುದ್ಯೋಗಿಗಳಾದ ನಮಗೆ ಬ್ಯಾಂಕಿನಿಂದ ಸಾಲ ಸೌಲಭ್ಯ ಮಂಜೂರು ಮಾಡಿದ್ದು, ಈಗ ನಾವು ಪಡೆದುಕೊಂಡ ಸಾಲವನ್ನು ನಮ್ಮ ದೈನಿಂದಿನ ವ್ಯವಹಾರದಲ್ಲಿ ಸಾಲದ ಕಂತುಗಳನ್ನು ಪ್ರತಿ ತಿಂಗಳು ತುಂಬಿ ಸಾಲವನ್ನು ಮರುಪಾವತಿ ಮತ್ತು ನಮ್ಮ ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದೇವೆ.

ಆದರೆ ನಮಗೆ ಬಹುದಿನಗಳಿಂದ ವಿದ್ಯಾವಂತ ನಿರುದ್ಯೋಗಿಗಳು ಪುರಸಭೆಯ ಗುರುತಿನ ಪತ್ರವನ್ನು ನೀಡಿ ನಮಗೆ ಸಾಲವನ್ನು ಮಂಜೂರು ಮಾಡಿದ್ದು ಈಗ ನಮಗೆ ಏಕಾ ಏಕಿ ನಮ್ಮ ಅಂಗಡಿಯ ವಿದ್ಯುತ್ ಕಡಿತಗೊಳಿಸುವಂತೆ ಉಲ್ಲೇಖ -2ರ ಪ್ರಕಾರ ನೋಟಿಸ್ ಜಾರಿ ಮಾಡಿದ್ದರಿಂದ ನಮ್ಮ ಕುಟುಂಬ ನಿರ್ವಹಣೆ ಮತ್ತು ತಾವು ನೀಡಿದ ಸಾಲವನ್ನು ಬ್ಯಾಂಕಿಗೆ ಮರು ಪಾವತಿ ಮಾಡುವದು ತುಂಬಾ ಸಮಸ್ಯೆಯಾಗುತ್ತದೆ.

ನಮ್ಮ ಅಂಗಡಿಗಳನ್ನು ಇಲ್ಲಿಂದ ತೆರವುಗೊಳಿಸಲು ಮುಂದಾದರೆ ನಮಗೆ ಸರಕಾರದ ತಮ್ಮ ಅಧೀನಲ್ಲಿ ಬರುವ ಜಾಗವನ್ನು ನೀಡಿ ನಮ್ಮ ಕುಟುಂಬ ಮತ್ತು ಬ್ಯಾಂಕಿನಿಂದ ಪಡೆದ ಸಾಲವನ್ನು ಮರು ಪಾವತಿ ಮಾಡಲು ಅನುಕೂಲ ಮಾಡಿಕೊಡಬೇಕು.

ಆದ್ದರಿಂದ ತಾವುಗಳು ಈ ಬಡ ನಿರುದ್ಯೋಗಿ ವಿದ್ಯಾವಂತರ ಕುಟುಂಬಗಳ ಮೇಲೆ ಕರುಣೆ ತೋರಿ ನಮಗೆ ದುಡಿದು ಊಟ ಮಾಡಲು ಅವಕಾಶ ಮಾಡಿಕೊಡಬೇಕೆಂದು ಅವರು ಮನವಿಯಲ್ಲಿ ವಿನಂತಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಬಸವರಾಜ್ ಗುಂಟಿ, ಪ್ರತಾಪ್ ಸಿಂಗ್, ವಿಜಯ ಸಿಂಗ್, ಅಜರುದ್ದೀನ್, ಚನ್ನಬಸವ ಕರಡಿ, ನವೀನ್ ಕುರ್ಮಾ, ನವಾಬ್ ಮನೆಯಾರ, ರಜಾಕ್ ಸೇರಿದಂತೆ ಇತರರಿದ್ದರು.

# ಬಿಎಸ್‌ವೈ ಜನಸೇವೆಯ ಸಾರ್ಥಕ 50ನೇ ವರ್ಷದ ಅಭಿಮಾನೋತ್ಸವದ ಪೂರ್ವಭಾವಿ ಸಭೆ-ಸೋಮಲಿಂಗಪ್ಪ

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,**ದಣಿವರಿಯದ ನಾಯಕ ರೈತ ನಾಯಕ ದಿನದಲಿತರ ನಾಯಕ ಮಾಜಿ ಮುಖ್ಯಮಂತ್ರಿಗಳಾದ ಬಿ ಎಸ್ ಯಡಿಯೂರಪ್ಪ ಜೀ ಅವರ ಜನಸೇವೆಯಲ್ಲಿ ಸಾರ್ಥಕ 50ನೇ ವರ್ಷದ ಅಭಿಮಾನೋತ್ಸವದ ಇಂದು ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಪಟ್ಟಣದ ಮಾಜಿ ಶಾಸಕರಾದ ಎಂ ಎಸ್ ಸೋಮಲಿಂಗಪ್ಪ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ಮಾಡಲಾಯಿತು. ಮತ್ತು ಅಭಿಮಾನೋತ್ಸವದ ಕರಪತ್ರಗಳನ್ನು ಹಂಚಿ, ಕಾರ್ ಗಳಿಗೆ ಅಂಟಿಸಲಾಯಿತು.



9 ನೇ ತಾರೀಕಿನಂದು ಚಿತ್ರದುರ್ಗದಲ್ಲಿ ನಡೆಯುವ ಅಭಿಮಾನೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಿರುಗುಪ್ಪ ವಿಧಾನಸಭಾ ಕ್ಷೇತ್ರದಿಂದ ಕರೆದುಕೊಂಡು ಹೋಗಿ ಬಿಎಸ್ ಯಡಿಯೂರಪ್ಪನವರಿಗೆ ಶಕ್ತಿಯನ್ನು ತುಂಬುವಂತ ಕೆಲಸ ನಾವೆಲ್ಲರೂ ಮಾಡೋಣ ಎಂದು ಮಾಜಿ ಶಾಸಕರು ಈ ಸಭೆಯಲ್ಲಿ ತಿಳಿಸಿದರು.

ಮಂಡಲ ಅಧ್ಯಕ್ಷರಾದ ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷರಾದ ಇಫ್ರಾಂಪುರ ವೀರನಗೌಡರು, ಹಿರಿಯರಾದ ಪ್ರತಾಪ್ ಚೌದ್ರಿ, ಎಂ ಆರ್ ಗೌಡ್ರು, ಖಾಜಾಸಾಬ್, ಬಿಜಿ ಹುಲಗಪ್ಪ, ಜಡೆಸಿವರುದ್ರಪ್ಪ, ಮಲ್ಲನಗೌಡ ,ಬಾಕಟ್ಟೆ ಈರಯ್ಯ, ಚಿದಾನಂದ ಗೌಡ, ಗಂಗಪ್ಪ, ನಾಗೇಶಪ್ಪ, ಲಕ್ಷ್ಮಿಪತಿ ಗೌಡ, ಎಚ್ ಶೇಕಪ್ಪ ,ಶಂಕ್ರಪ್ಪ ,ಶೇಖರ ಗೌಡ, ಜಿನ್ನಬಸಪ್ಪ, ಸುಧಾಕರ, ರಾಮರಾಜು, ಹೊನ್ನಪ್ಪ ,ಬಸವರಾಜ ,ಶಿವ್ ರೆಡ್ಡಿ ಗೌಡ, ಜಬಿವುಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ಮುಖಂಡರು ಕಾರ್ಯಕರ್ತರುಗಳು ಪಕ್ಷದ ಪದಾಧಿಕಾರಿಗಳು ಬಿಎಸ್ ವೈ ಅವರ ಅಭಿಮಾನಿಗಳು ಈ ಸಭೆಯಲ್ಲಿ ಭಾಗವಹಿಸಿ 9ನೇ ತಾರೀಖಿನಂದು ಅಭಿಮಾನೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುವುದಾಗಿ ತಿಳಿಸಿದ್ದಾರೆ ಎಂದು ಎಂ ಎಸ್ ಸಿದ್ದಪ್ಪ. ತೆಕ್ಕಲಕೋಟೆ 92 ಸಿರುಗುಪ್ಪ ವಿಧಾನಸಭಾ ಕ್ಷೇತ್ರ ತಿಳಿಸಿದ್ದಾರೆ.

# ...ಮೊದಲನೇ ಪುಟದಿಂದ

## ಮತಪತ್ರವನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ-ಸಿಎಂ ಸಿದ್ದರಾಮಯ್ಯ

ಅವರು ಗೆದ್ದಿದ್ದರು. ಇವೆಲ್ಲವೂ ಸಿಂಧು ಮತಗಳೆಂದು ರಿಟರ್ನಿಂಗ್ ಅಧಿಕಾರಿಗಳು, ಚುನಾವಣಾ ಏಜೆಂಟ್‌ಗಳು ಸಹಿ ಹಾಕಿ ಘೋಷಿಸಿದ್ದರು ಎಂದು ತಿಳಿಸಿದರು. ಘೋಷಣೆ ಆದ ಮೇಲೆ ಜೀವರಾಜ್ ಅವರು ಮಾಲ್ ಪ್ರಾಕ್ಟೀಸ್ ಆಗಿದೆ ಎಂದು ಹೈಕೋರ್ಟ್ ಮೊರೆ ಹೋಗಿದ್ದರು. ಅವರ ಅರ್ಜಿ ಪುರಸ್ಕರಿಸಿದ್ದ ಹೈಕೋರ್ಟ್ 6 -3 - 2026ರಂದು ಮರು ಎಣಿಕೆಗೆ ನಿರ್ದೇಶನ ನೀಡಿತ್ತು. ತಿರಸ್ಕೃತ ಮತಗಳನ್ನು ಮರು ಎಣಿಕೆ ವೇಳೆ ಸೇರ್ಪಡೆಗೊಳಿಸಬೇಕು ಮತ್ತು ಎಲ್ಲಾ ಪೋಸ್ಟಲ್ ಮತ ಎಣಿಕೆ ಮಾಡಬೇಕು ಎಂದು ನಿರ್ದೇಶನ ನೀಡಿತ್ತು. ಅದರಂತೆ ಮೊನ್ನೆ ಮರು ಎಣಿಕೆ ನಡೆಯಿತು. 2023ರಲ್ಲಿ ಅಂಚೆ ಮತಪತ್ರದಲ್ಲಿ 569 ಮತಗಳು ರಾಜೇಗೌಡರಿಗೆ ಲಭಿಸಿದ್ದವು. ಮರು ಎಣಿಕೆಯಲ್ಲಿ 314 ಮತಗಳು ಮಾತ್ರ ಸಿಂಧು ಆಗುತ್ತವೆ. ಅದರಲ್ಲಿ 255 ಮತಗಳು ಅಸಿಂಧು ಆಗುತ್ತವೆ. ಅದು ಹೇಗೆ ಅಸಿಂಧು ಆಗುತ್ತವೆ? ಎಂದು ಸಿಎಂ ಪ್ರಶ್ನಿಸಿದರು.

ವ್ಯವಸ್ಥಿತವಾಗಿ ತಿದ್ದಲಾಗಿದೆ : 2023ರಲ್ಲಿ ಜೀವರಾಜ್‌ಗೆ 692 ಅಂಚೆ ಮತ ಬಿದ್ದಿತ್ತು. ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. 2 ಮತಗಳು ಮಾತ್ರ ಕಡಿಮೆಯಾಗಿವೆ. ಇದನ್ನು ನೋಡಿದಾಗ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ವೋಟ್ ಚೋರಿ ಮಾಡಿರುವುದು ಸ್ಪಷ್ಟವಾಗುತ್ತದೆ. ರಾಜೇಗೌಡರ 255 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ.

ಎರಡು ಮಾರ್ಕ್ ಇದ್ದರೆ ಅಸಿಂಧು ಮಾಡುತ್ತಾರೆ. ಹಿಂದಿನ ಚುನಾವಣಾ ಅಧಿಕಾರಿ ಸಿಂಧು ಮಾಡಿರುವುದು, ಈಗ ಹೇಗೆ ಅಸಿಂಧು ಮಾಡಿದ್ದಾರೆ?. 52 ಮತಗಳು ಜೀವರಾಜ್‌ಗೆ ಹೆಚ್ಚಿಗೆ ಬಂದಿವೆ.

ಎಲ್ಲಾ ಮತ ದಾಖಲಾತಿಗಳನ್ನು ಟ್ರಂಕ್‌ನಲ್ಲಿ ಇಟ್ಟು ಕಳುಹಿಸುತ್ತಾರೆ. ಕೌಂಟಿಂಗ್ ಮಾಡಿದಾಗ ಅವರದೇ ಸರ್ಕಾರ ಇತ್ತು. ಡಬಲ್ ಇಂಜಿನ್ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ತಿದ್ದಿರುವುದು ಖಚಿತವಾಗಿದೆ ಎಂದು ಆರೋಪಿಸಿದರು.

ಇದು ಕ್ರಿಮಿನಲ್ ಪಿತೂರಿ. ಟ್ಯಾಂಪರಿಂಗ್ ಆಗಿದೆ. ರಾಜೇಗೌಡರಿಗೆ ಮೂರನೇ ಸುತ್ತಿನಲ್ಲಿ ಲಭಿಸಿದ್ದ 170 ಅಂಚೆ ಮತಗಳು ಈಗ ಅಸಿಂಧುವಾಗಿದೆ. ಹಣ್ಣು ತಿಂದವನು ತಪ್ಪಿಸಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಹಾಕಿಕೊಂಡ ಎಂಬ ಗಾದೆ ಮಾತಿನಂತೆ ಆಗಿದೆ. ಇದನ್ನು ಸಮರ್ಥನೆ ಮಾಡಿದವರು ಕೇಂದ್ರ ಸಚಿವ ಜೋಶಿಯವರು, ಶೋಭಾ ಕರಂದ್ಲಾಜೆ ಅವರು ಮತ್ತು ವಿಪಕ್ಷ ನಾಯಕ ಆರ್. ಅಶೋಕ್. 2023ರಲ್ಲಿ ನಮ್ಮ ಪಕ್ಷದಿಂದ ಏಜೆಂಟ್ ಸುನೀಲ್ ಕುಮಸರ್ ಸಹಿ ಹಾಕಿದ್ದಾರೆ. ಬಿಜೆಪಿ ಏಜೆಂಟ್, ಜೆಡಿಎಸ್ ಏಜೆಂಟ್‌ಗಳು ಸಹಿ ಹಾಕಿದ್ದಾರೆ. 2023ರಲ್ಲೇ ಬಿಜೆಪಿ ಏಜೆಂಟ್‌ಗಳು ಆಕ್ಷೇಪ ವ್ಯಕ್ತಪಡಿಸಬೇಕಾಗಿತ್ತಲ್ಲ. ಆಗ ಏಕೆ ಆಕ್ಷೇಪಿಸಿಲ್ಲ?. ಆಗಲೇ ಬಿಜೆಪಿಯವರು ತಿದ್ದುವ ಕೆಲಸ ಮಾಡಿದ್ದಾರೆ ಎಂದು ದೂರಿದರು.

ಮರು ಎಣಿಕೆ ವೇಳೆ ಕೇಂದ್ರ ವೀಕ್ಷಕರು ಬಂದಿದ್ದರು. ನಮ್ಮ ಮಾಹಿತಿ ಪ್ರಕಾರ ಆ ವೀಕ್ಷಕರು ಕೂಡ ಚುನಾವಣಾಧಿಕಾರಿಗೆ ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವುದಾಗಿ ಪತ್ರ ಬರೆದಿದ್ದಾರೆ. ರಾಜೇಗೌಡರದ್ದು ಮಾತ್ರ ಅಸಿಂಧುವಾಗಿದೆ. ಜೀವರಾಜ್‌ರದ್ದು ಏಕೆ ಆಗಿಲ್ಲ?. ಬಿಜೆಪಿಯವರು ಈ ಹಿಂದೆ ಚಿಲುಮೆ ಎಂಬ ಸಂಸ್ಥೆಯಿಂದ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಹೊರಟಿದ್ದರು. ಆಳಂದಲ್ಲಿ ನೈಜ ಮತದಾರರನ್ನೇ ಬಿಟ್ಟು ಬಿಟ್ಟಿದ್ದರು. ಬಿಜೆಪಿಯವರು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲದವರು. ನಿಷ್ಪಕ್ಷಪಾತ ಚುನಾವಣೆಯಲ್ಲಿ ನಂಬಿಕೆ ಇಲ್ಲದವರು. ಅವರು ಇಂಥ ಅಪರಾಧ ಮಾಡಲು ಹಿಂದೆ ಮುಂದೆ ನೋಡಲ್ಲ. ಮಾರ್ಕ್ ಮಾಡಿದ ಇಂಕ್‌ನಲ್ಲಿ ಬದಲಾವಣೆ ಇದೆ. ಅದಕ್ಕಾಗಿ ಅದನ್ನು ಫಾರೆನ್ಸಿಕ್‌ಗೆ ಕಳುಹಿಸಿಕೊಡಬೇಕಾಗಿತ್ತು. ಇದೆಲ್ಲಾ ಗೊತ್ತಿದ್ದರೂ ಫಲಿತಾಂಶ ಘೋಷಣೆ ಮಾಡಿದ್ದಾರೆ. ಚುನಾವಣಾಧಿಕಾರಿಗಳಿಗೆ ಚುನಾವಣಾ ಆಯೋಗದ ಒತ್ತಡ ಇರಬೇಕು ಅನ್ನಿಸುತ್ತದೆ. ನಾವು ಎಫ್‌ಐಆರ್ ಮಾಡಿದ್ದೇವೆ. ಕೋರ್ಟ್‌ಗೂ ಕೂಡ ಹೋಗಿದ್ದೇವೆ ಎಂದರು.

ಚುನಾವಣಾ ವೀಕ್ಷಕರು ಘೋಷಣೆ ಮಾಡಬೇಕು ಎಂದು ಹೇಳಿದ ಮೇಲೆ ಘೋಷಣೆ ಮಾಡಬೇಕು. ಇವರು ಕೇಳದೆನೇ ಘೋಷಣೆ ಮಾಡಿದ್ದಾರೆ. ಆತುರ ಆತುರವಾಗಿ ಘೋಷಣೆ ಮಾಡಿರುವುದು ಸರಿ ಇಲ್ಲ. ಬಿಜೆಪಿಯವರಿಗೆ ಸಪೋರ್ಟ್ ಮಾಡಲು ಘೋಷಣೆ ಮಾಡಿದ್ದಾರೆ ಎಂಬುದು ನಮ್ಮ ಆರೋಪ. ಒಟ್ಟಾರೆಯಾಗಿ ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ಮತಕಳವು ಮಾಡಿದ್ದಾರೆ. ಎಲ್ಲಾ ಎಥಿಕ್ಸ್‌ನ್ನು ಗಾಳಿಗೆ ತೂರಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಪಂಚ ಗ್ಯಾರಂಟಿ ಕೈ ಹಿಡಿದಿದೆ : ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದಾರೆ. ಇದು ಮುಂದಿನ 2028ರ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳುತ್ತಿದ್ದರು. ಅವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು ಎಂದು ಹೇಳಿದರು.

ಈ ಹಿಂದೆ ನಡೆದ ಮೂರು ಉಪ ಚುನಾವಣೆಗಳಲ್ಲೂ ಕಾಂಗ್ರೆಸ್ ಜಯ ಗಳಿಸಿದೆ. ಇದರರ್ಥ ನಮ್ಮ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ನಮ್ಮ ಕಾರ್ಯಕ್ರಮಗಳು ಮತದಾರರನ್ನು ತಲುಪಿವೆ. ಜನರು ನಮ್ಮ ಮೇಲೆ ವಿಶ್ವಾಸ, ಅಭಿಮಾನ ಇರಿಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಪಕ್ಷ. ಕೊಟ್ಟ ಮಾತಿನಂತೆ ನಡೆಯುವ ಪಕ್ಷ. ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿದ್ದಾವೆ ಎಂದು ತಿಳಿಸಿದರು. ಕೆಪಿಸಿಸಿ ಕ್ರಮ ಕೈಗೊಂಡಿರುವುದು ಸರಿ ಇದೆ : ದಾವಣಗೆರೆಯಲ್ಲಿ ಎಸ್‌ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲನೆ ಮಾಡಲಿದ್ದೇವೆ. ಮುಸ್ಲಿಂಮರು ದಾವಣಗೆರೆಯಲ್ಲಿ ಕಾಂಗ್ರೆಸ್‌ಗೆ 35,000 ಮತ ಹಾಕಿದ್ದಾರೆ. ಒಟ್ಟು 56,000 ಮುಸ್ಲಿಮರು ಮತ ಚಲಾಯಿಸಿದ್ದಾರೆ. ಖಈಕಐಗೆ ಈ ಬಾರಿ ಹೆಚ್ಚು ಮತ ಹಾಕಿದ್ದಾರೆ. ನಮಗೆ ಏಕೆ ಕಡಿಮೆ ಮತ ಬಿದ್ದಿವೆ ಎಂಬುದಾಗಿ ತನಿಖೆ ಮಾಡುತ್ತೇವೆ. ಹಾಗಾಗಿ, ಕೆಪಿಸಿಸಿಯವರು ಮುಸ್ಲಿಂ ನಾಯಕರ ವಿರುದ್ಧ ತೆಗೆದುಕೊಂಡಿರುವ ಕ್ರಮ ಸರಿ ಇದೆ ಎಂದು ಸಮರ್ಥಿಸಿಕೊಂಡರು. ತಮಿಳುನಾಡು ಚುನಾವಣೆಯಲ್ಲಿ ನಟ ವಿಜಯ್ ಗೆಲುವು ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಜನರಿಗೆ ಬದಲಾವಣೆ ಬೇಕಿತ್ತು. ತಮಿಳುನಾಡು ಜನರು ಬದಲಾವಣೆ ಬಯಸಿ ಮತ ಹಾಕಿದ್ದಾರೆ. ಯುವ ಜನಾಂಗ ನಟ ವಿಜಯ್‌ಗೆ ಮತ ಹಾಕಿದ್ದಾರೆ. ಇದು ಬೇರೆ ರಾಜ್ಯಗಳ ಮೇಲೆ ಪ್ರಭಾವ ಆಗವುದಿಲ್ಲ. ಇದು ಅಚ್ಚರಿಯ ಫಲಿತಾಂಶ ಆಗಿದೆ. ಕೇರಳದಲ್ಲಿ ನಿರೀಕ್ಷೆ ಮಾಡಿದ್ದೆವು ಎಂದು ಹೇಳಿದರು.

## ಬೆಂಗಳೂರು: ಕುಖ್ಯಾತ ಮನೆಗಳ್ಳನ ಬಂಧನ, ₹1.30 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ

**ಬೆಂಗಳೂರು,ಮೇ.5-**ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿ ಕಳ್ಳತನ ಮಾಡುತ್ತಿದ್ದ ಕುಖ್ಯಾತ ಕಳ್ಳನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪ್ರಕಾಶ್ ಅಲಿಯಾಸ್ ಜಂಗ್ಲಿ ಬಂಧಿತ ಆರೋಪಿ. ಆತನಿಂದ 1 ಕೋಟಿ 30 ಲಕ್ಷ ರೂಪಾಯಿ ಮೌಲ್ಯದ 885 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದ್ದು, ಬರೋಬ್ಬರಿ 18 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಗಲು ಕಾರಿನಲ್ಲಿ ನಗರದಾದ್ಯಂತ ಸುತ್ತಾಡುತ್ತಿದ್ದ ಆರೋಪಿ, ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದ. ನಂತರ ರಾತ್ರಿ ವೇಳೆ ಆ ಮನೆಗಳ ಕಿಟಕಿಗಳನ್ನು ಕತ್ತರಿಸಿ, ಒಳನುಗ್ಗಿ ಕಳ್ಳತನ ಮಾಡುತ್ತಿದ್ದ. ಆರೋಪಿಯ ವಿರುದ್ಧ



ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 64 ಪ್ರಕರಣಗಳು ದಾಖಲಾಗಿದ್ದವು. ಇಂದಿರಾನಗರ ಠಾಣೆ ಪೊಲೀಸರು ಕಳ್ಳತನ ಪ್ರಕರಣವೊಂದರ ತನಿಖೆ ನಡೆಸಿದಾಗ ಪ್ರಕಾಶ್‌ನನ್ನ ಬಂಧಿಸಿದ್ದು, ಆತನಿಂದ 8 ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಮಾಲೀಕನ ಮನೆಯಲ್ಲೇ ಕೈಚಳಕ ತೋರಿದ ದಂಪತಿಗಳ ಬಂಧನ: ಕೆಲಸ ಕೊಟ್ಟು, ಆಶ್ರಯ ನೀಡಿದ್ದ ಮಾಲಿಕನ ಮನೆಯಲ್ಲೇ ಕಳ್ಳತನ ಮಾಡಿದ್ದ ದಂಪತಿಯನ್ನ ಸಿ.ಕೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ. ಉದ್ಯಮಿ ಹಾಗೂ ಗುತ್ತಿಗೆದಾರ ಮಲ್ಲಿಕಾರ್ಜುನ್ ನಾಯ್ಡು ಎಂಬುವರ ಮನೆಯಲ್ಲಿ ಕೃತ್ಯ ಎಸಗಿದ್ದ ಐಶ್ವರ್ಯಾ (21) ಹಾಗೂ ಮಣಿಕಂಠ (26) ಬಂಧಿತರು. ಆರೋಪಿಗಳಿಂದ 14 ಲಕ್ಷ ರೂ. ನಗದು, 199 ಗ್ರಾಂ ಚಿನ್ನದ ಆಭರಣಗಳು, 730 ಗ್ರಾಂ ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೂವರೆ ವರ್ಷದ ಪುಟ್ಟ ಮಗುವಿದ್ದ ದಂಪತಿಗೆ ಮಲ್ಲಿಕಾರ್ಜುನ್ ನಾಯ್ಡು ಅವರು 4 ತಿಂಗಳುಗಳ ಹಿಂದೆ ಮನೆಯಲ್ಲಿ ಕೆಲಸ ನೀಡಿ ಆಶ್ರಯ ನೀಡಿದ್ದರು. ಮಾಲೀಕರ ನಂಬಿಕೆ ಗಳಿಸಿದ್ದ ಆರೋಪಿಗಳು ಹಂತ ಹಂತವಾಗಿ ಮನೆಯಲ್ಲಿದ್ದ ಹಣ ಮತ್ತು ಒಡವೆಗಳನ್ನು ದೋಚುತ್ತಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಂತ ಹಂತವಾಗಿ ನಗದು, ಚಿನ್ನಾಭರಣ ದೋಚಿದ್ದರು. ಎಪ್ರಿಲ್ 25ರಂದು ಮನೆಯಲ್ಲಿದ್ದ ಚಿನ್ನದ ಒಡವೆಗಳು ನಾಪತ್ತೆಯಾದಾಗ ಅನುಮಾನಗೊಂಡ ಮಾಲೀಕ ಮಲ್ಲಿಕಾರ್ಜುನ್ ನಾಯ್ಡು ಈ ಬಗ್ಗೆ ಸಿ.ಕೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ತನಿಖೆ ಕೈಗೊಂಡ ಪೊಲೀಸರು, ಮನೆಗೆಲಸದ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸತ್ಯಾಂಶ ಹೊರಬಂದಿತ್ತು. ಪ್ರಸ್ತುತ ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ಅವರನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

## ಪಂಚಮಸಾಲಿ ಮಠದಲ್ಲಿ ಯಾವುದೇ ಸಭೆ, ಸಮಾರಂಭ ನಡೆಸುವಂತಿಲ್ಲ: ಮೇ 30ರ ವರೆಗೆ ನಿಷೇಧಾಜ್ಞೆ ಜಾರಿ



**ದಾವಣಗೆರೆ,ಮೇ.5-**ಹರಿಹರ ಪಂಚಮಸಾಲಿ ಪೀಠದ ವಿವಾದ ಮುಂದುವರೆದಿದ್ದು, ಸ್ವಾಮೀಜಿ ಹಾಗೂ ಟ್ರಸ್ಟಿಗಳ ನಡುವೆ ಮುನಿಸು ಮುಗಿಯುವಂತೆ ಕಾಣುತ್ತಿಲ್ಲ. ವಚನಾನಂದ ಸ್ವಾಮೀಜಿಗೆ, ಮಠದ ಟ್ರಸ್ಟಿಗಳಿಗೆ ಹಾಗೂ ಅವರ ಬೆಂಬಲಿಗರಿಗೆ ಜಿಲ್ಲಾಡಳಿತದಿಂದ ಹಾಗೂ ಪೊಲೀಸ್ ಇಲಾಖೆಯಿಂದ ನೋಟಿಸ್ ನೀಡಲಾಗಿದ್ದರೂ ಇಂದು ಸಭೆ ನಡೆಸಲು ಮುಂದಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎನ್‌ಎಸ್ 163 ಅಡಿಯಲ್ಲಿ ನೋಟಿಸ್ ಜಾರಿಗೊಳಿಸಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಮಠದಲ್ಲಿ ವಿವಾದಗಳು ಹೆಚ್ಚಾಗುತ್ತಿರುವ ಬೆನ್ನಲ್ಲೇ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ ನಡೆಸುವಂತಿಲ್ಲ ಎಂದು ಜಿಲ್ಲಾಧಿಕಾರಿ ಜಿ ಎಂ ಗಂಗಾಧರಸ್ವಾಮಿ ಮೇ 1 ರಿಂದ 30ರ ವರೆಗೆ ಪಂಚಮಸಾಲಿ ಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಕಳೆದ ಮಾರ್ಚ್ 10 ರಿಂದ ಮಠದಲ್ಲಿ ಎರಡು ಕಡೆ ಬೆಂಬಲಿಗರಿಂದ ಸಭೆ, ಸಮಾರಂಭ, ಮಾಧ್ಯಮಗೋಷ್ಠಿಗಳು ನಡೆಯುತ್ತಿವೆ. ಇವು ವಿಕೋಪಕ್ಕೆ ತಿರುಗಿದ್ದು, ಗಲಾಟೆಗಳು, ಪ್ರಚೋದನಕಾರಿ ಹೇಳಿಕೆಗಳು ವ್ಯಕ್ತವಾಗುತ್ತಿವೆ. ಆದ್ದರಿಂದ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ, ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆ.

ಪೊಲೀಸ್ ಇಲಾಖೆ ಪದೇ ಪದೇ ಭದ್ರತೆ ನೀಡಲು ಆಗುವುದಿಲ್ಲ. ಆದ್ದರಿಂದ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ, ಮಾಧ್ಯಮಗೋಷ್ಠಿ ನಡೆಸುವಂತಿಲ್ಲ ಎಂದು ನೋಟಿಸ್ ನೀಡಲಾಗಿದೆ. ಹರಿಹರ ಗ್ರಾಮಾಂತರ ಠಾಣೆಯಿಂದಲೂ ಟ್ರಸ್ಟಿಗಳಿಗೆ ಹಾಗೂ ಸ್ವಾಮೀಜಿಗೆ ನೋಟಿಸ್ ಜಾರಿ ಮಾಡಲಾಗಿದೆ.

ವಚನಾನಂದ ಸ್ವಾಮೀಜಿ ಹಾಗೂ ಬೆಂಬಲಿಗರು ಇಂದು ಟ್ರಸ್ಟಿಗಳ ವಿರುದ್ಧ ಲೆಕ್ಕಕೊಡಿ ಅಭಿಯಾನ ಹಮ್ಮಿಕೊಂಡಿದ್ದರು. ಕಳೆದ ಎಪ್ರಿಲ್ 27 ರಂದು ಟ್ರಸ್ಟಿಗಳು ಸುಳ್ಳು ಲೆಕ್ಕ ನೀಡಿದ್ದಾರೆ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದರು. ಪಾರದರ್ಶಕ ಲೆಕ್ಕವನ್ನು ಮಂಡನೆ ಮಾಡಬೇಕು ಎಂದು ಸ್ವಾಮೀಜಿ ಬೆಂಬಲಿಗರು ಮನವಿ ಮಾಡಿದ್ರು. ಹಳ್ಳಿ ಹಳ್ಳಿಗೂ ತೆರಳಿ ಭಕ್ತರು ನೀಡಿದ ಕಾಣಿಕೆ ಬಗ್ಗೆ ಪಟ್ಟಿ ಮಾಡಲು ಸ್ವಾಮೀಜಿ ಬೆಂಬಲಿಗರು ಮುಂದಾಗಿದ್ದರು. ಇನ್ನು ಇಂದು ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಸಭೆ ನಡೆಯಲಿದ್ದು, ಈ ಹಿನ್ನೆಲೆ ಯಾವುದೇ ಸಭೆ ನಡೆಸದಂತೆ ಮುನ್ನೆಚ್ಚರಿಕೆಯಿಂದ ನಿಷೇಧಾಜ್ಞೆಯನ್ನು ಜಿಲ್ಲಾಡಳಿತ ಜಾರಿ ಮಾಡಿದೆ.

## ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲ್ಲ, ಅಕ್ರಮವಾಗಿ ಗೆಲುವು ಸಾಧಿಸಿದ ಬಿಜೆಪಿ: ಮಮತಾ ಬ್ಯಾನರ್ಜಿ ಆರೋಪ




**ಕೋಲ್ಕತ್ತಾ(ಪಶ್ಚಿಮಬಂಗಾಳ),ಮೇ.5-**ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲು ಕಂಡರೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಹೇಳಿ ದ್ದಾರೆ.

ಕೋಲ್ಕತ್ತಾದಲ್ಲಿ ಇಂದು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ಪಕ್ಷವನ್ನು (ಟಿಎಂಸಿ) ಬಲವಂತವಾಗಿ ಸೋಲಿಸಲಾಗಿದೆ. ಇದು ಬಿಜೆಪಿಯ ನಿಜವಾದ ಗೆಲುವಲ್ಲ. ಅಕ್ರಮ, ಅನೈತಿಕವಾಗಿ ಚುನಾವಣೆ ನಡೆಸಲಾಗಿದೆ. ನಾನು ಭವಾನಿಪುರದಲ್ಲಿ ಗೆದ್ದಿದ್ದರೂ ಸೋಲಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ಪ್ರಜಾಪ್ರಭುತ್ವದ ಮಾದರಿಯಲ್ಲಿ ನಿಜವಾಗಿಯೂ ಗೆದ್ದಿದ್ದರೆ, ಯಾವುದೇ ತಕರಾರು ಇರಲಿಲ್ಲ. ಸೋಲು- ಗೆಲುವು ಚುನಾವಣೆಗಳ ಭಾಗ. ನಿಯಮಾನುಸಾರ ಗೆಲ್ಲದ ಕಾರಣ, ನಾನು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ನಮ್ಮ ಪಕ್ಷವು ಒಗ್ಗಟ್ಟಾಗಿದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.ನನಗೆ ಕುರ್ಚಿಯಲ್ಲ, ಜನರು ಮುಖ್ಯ: ಭವಾನಿಪುರದಲ್ಲಿ ಸೋತಿದ್ದು ವಿಧಾನಸಭೆ ಪ್ರವೇಶಿಸಲು ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೀರಾ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ವಿಧಾನಸಭೆಗೆ ಹೋಗುವುದಿಲ್ಲ. ನನ್ನನ್ನು ಬಲವಂತವಾಗಿ ಸೋಲಿಸಲಾಗಿದೆ. ನನಗೆ ಕುರ್ಚಿಯ ಬಗ್ಗೆ ಕಾಳಜಿ ಇಲ್ಲ. ಜನರ ಬಗ್ಗೆ ಕಾಳಜಿ ಇದೆ. ನಾನು ಈಗ ಸ್ವತಂತ್ರಳಾಗಿದ್ದೇನೆ. ಬೀದಿಯಲ್ಲಿದ್ದೇನೆ, ಇಲ್ಲಿಯೇ ಇರುತ್ತೇನೆ ಎಂದು ಹೇಳಿದರು.ಪಕ್ಷದ ಕಚೇರಿಗಳ ಮೇಲೆ ದಾಳಿ ಖಂಡನೀಯ: ಇನ್ನು, ತಮ್ಮ ಪಕ್ಷದ ಕಚೇರಿಗಳ ಮೇಲೆ ಅಲ್ಲಲ್ಲಿ ನಡೆಯುತ್ತಿರುವ ದಾಳಿಯನ್ನು ಖಂಡಿಸಿದರು. ಬಿಜೆಪಿ ಕಾರ್ಯಕರ್ತರು ನಮ್ಮ ಕಚೇರಿಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡುತ್ತಿದ್ದಾರೆ. ಕಚೇರಿಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ನಿನ್ನೆ (ಸೋಮವಾರ) ರಾತ್ರಿ ಪಕ್ಷದ ಮುಖ್ಯ ಕಚೇರಿಯನ್ನು ಆಕ್ರಮಿಸಲು ಪ್ರಯತ್ನ ನಡೆದಿದೆ. ಅಭಿಷೇಕ್ ಬ್ಯಾನರ್ಜಿ ಅವರ ಕಚೇರಿಯ ಮೇಲೂ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದರು.ಟಿಎಂಸಿ ಕಾರ್ಯಕರ್ತರನ್ನು ಬಿಜೆಪಿಗೆ ಸೇರಲು ಆಮಿಷವೊಡ್ಡಲಾಗುತ್ತಿದೆ. ಅವರು ತಮ್ಮ ಸುರಕ್ಷತೆಗಾಗಿ ಹಾಗೆ ಮಾಡಬಹುದು. ಇಂದು ಅವರು ಪಕ್ಷದಿಂದ ಹೋಗಬಹುದು. ಆದರೆ ಭವಿಷ್ಯದಲ್ಲಿ ಅವರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಲಿದ್ದಾರೆ ಎಂದು ಮಮತಾ ಹೇಳಿದರು.

ನೂತನ ಸರ್ಕಾರ ರಚನೆಗೆ ಬಿಜೆಪಿ ಸಜ್ಜು: ಐತಿಹಾಸಿಕ ಜಯ ಸಾಧಿಸಿರುವ ಬಿಜೆಪಿ ರಾಜ್ಯದಲ್ಲಿ ನೂತನ ಸರ್ಕಾರ ರಚನೆಗೆ ದಿನಾಂಕ ನಿಗದಿ ಮಾಡಿ ಘೋಷಿಸಿದೆ. ಮೇ 9 ರಂದು ರವೀಂದ್ರನಾಥ್ ಟ್ಯಾಗೋರ್ ಅವರ ಜನ್ಮವಾಗಿದ್ದು ಅಂದೇ ಸರ್ಕಾರ ರಚನೆಯಾಗಲಿದೆ ಎಂದು ಬಂಗಾಳ ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಅವರು ಇಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

## ದಿಢೀರ್ ಬೆಂಕಿಯಿಂದ ಹೊತ್ತಿ ಉರಿದ ಪಲ್ಲಕಿ ಬಸ್, ಪ್ರಯಾಣಿಕರು ಪಾರು

ಅಗ್ನಿ ಅವಘಡಕ್ಕೆ ಬ್ರೇಕ್ ಲೈನರ್ ವೈಫಲ್ಯ ಕಾರಣ: ಪ್ರಾಥಮಿಕ ತನಿಖೆಯಲ್ಲಿ ಬ್ರೇಕ್ ಲೈನರ್ ದೋಷವೇ ಬೆಂಕಿಗೆ ಕಾರಣವಾಗಿರುವ ಸಾಧ್ಯತೆ ವ್ಯಕ್ತವಾಗಿದೆ. ರಾಣೇಬೆನ್ನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಬಸ್‌ಗೆ ಹೊಸದಾಗಿ ಬ್ರೇಕ್ ಲೈನರ್ ಹಾಕಿಸಲಾಗಿತ್ತು." ಹರಿಹರ ಸಮೀಪ ಬಂದಾಗ ಬ್ರೇಕ್ ಲೈನರ್ ಮತ್ತು ಟೈರ್ ನಡುವೆ ಹೊಗೆ ಕಾಣಿಸಿಕೊಂಡಿದೆ. ಪ್ರಯಾಣಿಕರು ಕಂಡಕ್ಟರ್ ಮತ್ತು ಚಾಲಕನಿಗೆ ಮಾಹಿತಿ ನೀಡಿದ್ದಾರೆ. ಬ್ರೇಕ್ ಲೈನರ್ ಪರೀಕ್ಷಿಸಿದ್ ಚಾಲಕ ಮತ್ತು ನಿರ್ವಾಹಕ, ಗದಗದಲ್ಲಿ ಸರಿ ಮಾಡಿಸಿದರ್ ಆಯಿತು ಎಂದು ಪಯಣ ಆರಂಭಿಸಿದ್ದಾರೆ. ನಂತರ ರಾಣೇಬೆನ್ನೂರಲ್ಲಿ ಮತ್ತೆ ಹೊಗೆ ಕಾಣಿಸಿಕೊಂಡಿದೆ. ನಂತರ ದೇವರಗುಡ್ಡದ ಬಳಿ ಬಸ್ ಟೈರ್ ಸ್ಫೋಟಗೊಂಡಿದೆ. ಲೈನರ್ ನಡುವೆ ಘರ್ಷಣೆಯಾಗಿ ಬೆಂಕಿ ಹತ್ತಿಕೊಂಡಿದೆ. ಪರಿಸ್ಥಿತಿ ಗಂಭೀರವಾಗುತ್ತಿರುವುದನ್ನು ಅರಿತ ಚಾಲಕ ಫಕ್ಕೀರಪ್ಪ ಗಡಾದ ತಕ್ಷಣ ಬಸ್ ನಿಲ್ಲಿಸಿ, ಯಾವುದೇ ಗಾಬರಿಯಾಗದೆ ಪ್ರಯಾಣಿಕರನ್ನು ಹೊರಗೆ ಬಿಡಲು ಮುಂದಾದರು. ಬಸ್ ಬಾಗಿಲು ಮೂಲಕ ಎಲ್ಲರನ್ನೂ ಇಳಿಸಲು ಸಮಯ ಸಾಲದ ಕಾರಣ, ಗಾಜು ಒಡೆದು ಪ್ರಯಾಣಿಕರನ್ನು ಹೊರ ಕಳುಹಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು.

ಸೋಮವಾರ ರಾತ್ರಿ ಪಲ್ಲಕ್ಕಿ ಬಸ್ ಬೆಂಗಳೂರಿನಿಂದ ಹೊರಟಿತ್ತು. ಓಅ-57-ಊ6680 ಸಂಖ್ಯೆಯ ಬಸ್‌ನಲ್ಲಿ ಸುಮಾರು ಹದಿನೈದಕ್ಕೂ ಹೆಚ್ಚು ಪ್ರಯಾಣಿಕರು ಗದಗ ಕಡೆಗೆ ಪ್ರಯಾಣಿಸುತ್ತಿದ್ದರು. ಬಸ್ ಚಲಿಸುತ್ತಿದ್ದಾಗ ಬ್ರೇಕ್ ಲೈನರ್ನಲ್ಲಿ ಉಂಟಾದ ತೊಂದರೆಯಿಂದ ಕಿಡಿ ಹೊತ್ತಿಕೊಂಡು ಪೂರ್ಣ ಬಸ್ ಸುಟ್ಟು ಹೋಗಿದೆ.

ಆರಂಭದಲ್ಲಿ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿ ಕೆಲವೇ ಕ್ಷಣಗಳಲ್ಲಿ ಬಸ್‌ನ ಹಿಂಭಾಗವನ್ನು ಆವರಿಸಿತು. ಈ ವೇಳೆ ಒಟ್ಟು ಹದಿನೇಳು ಮಂದಿ ಪ್ರಯಾಣಿಕರು ಪಾರಾಗಿದ್ದು, ಯಾರಿಗೂ ಪ್ರಾಣಾಪಾಯವಾಗಿಲ್ಲ. ಪ್ರತ್ಯಕ್ಷದರ್ಶಿಗಳು ಚಾಲಕನ ಕರ್ತವ್ಯ ಹಾಗು ಸಮಯಪ್ರಜ್ಞೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಚಾಲಕನ ಧೈರ್ಯ ಮತ್ತು ಚಾತುರ್ಯದಿಂದಲೇ ನಾವು ಬದುಕಿದ್ದೇವೆ ಎಂದು ಕೆಲ ಪ್ರಯಾಣಿಕರು ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳೀಯರು, ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಮುಂದಾದರು. ಆದರೆ ಅಷ್ಟರಲ್ಲಾಗಲೇ ಬಸ್ ಸಂಪೂರ್ಣ ಸುಟ್ಟು ಕರಕಲಾಗಿತ್ತು.

## ಕೇರಳದಲ್ಲೂ ನೆಲೆ ಕಂಡುಕೊಂಡ ಬಿಜೆಪಿ

## 3 ಕಡೆ ಅರಳಿದ ಕಮಲ, 6 ಕ್ಷೇತ್ರಗಳಲ್ಲಿ ಎರಡನೇ ಸ್ಥಾನ

ಕಮಲ ಅರಳಿಸಿದ್ದಾರೆ. ಇದಲ್ಲದೆ, ತಿರುವಲ್ಲ, ಪಾಲಕ್ಕಾಡ್, ಮಲಂಪುಳ, ಅಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳಲ್ಲಿ ಬಿಜೆಪಿ ಎರಡನೇ ಸ್ಥಾನ ಗಳಿಸಿದೆ. ತಿರುವಲ್ಲದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅನೂಪ್ ಆ್ಯಂಟನಿ 43,078 ಮತಗಳೊಂದಿಗೆ ಎರಡನೇ ಸ್ಥಾನ ಗಳಿಸಿದರು. ಕೇರಳ ಕಾಂಗ್ರೆಸ್‌ನ (ಕೆಇಸಿ) ವರ್ಗೀಸ್ ಮಾಮ್ಮನ್ ವಿರುದ್ಧ 10,146 ಮತಗಳ ಅಂತರದಿಂದ ಸೋಲನುಭವಿಸಿದರು. 2021ರ ಚುನಾವಣೆಗೆ ಹೋಲಿಸಿದರೆ ಕ್ಷೇತ್ರದಲ್ಲಿ ಪಡೆದ ಮತಗಳ ಸಂಖ್ಯೆ ಹೆಚ್ಚಳವಾಗಿದೆ. 2021ರಲ್ಲಿ ಬಿಜೆಪಿ ಶೇ. 16.25ರಷ್ಟು ಮತ ಗಳಿಸಿ ಮೂರನೇ ಸ್ಥಾನದಲ್ಲಿತ್ತು. ಈ ಸಲ ಶೇ. 30.61ರಷ್ಟು ಮತ ಗಳಿಸಿದೆ. ಪಾಲಕ್ಕಾಡ್‌ನಲ್ಲಿ ಯುಡಿಎಫ್‌ನ ರಮೇಶ್ ಪಿಶಾರಡಿ ವಿರುದ್ಧ ಬಿಜೆಪಿಯ ಟಫ್ಫೈರ್ ಬ್ರಾಂಡ್‌ಟಿ ನಾಯಕಿ ಶೋಭಾ ಸುರೇಂದ್ರನ್, 13,147 ಮತಗಳ ಅಂತರದಿಂದ ಸೋಲನುಭವಿಸಿದರು. ಶೋಭಾ 49,052 ಮತಗಳನ್ನು ಪಡೆದರೆ, ಪಿಶಾರಡಿ 62,199 ಮತಗಳನ್ನು ಪಡೆದು ಗೆದ್ದು ಬೀಗಿದರು. 2024ರ ಪಾಲಕ್ಕಾಡ್ ಉಪಚುನಾವಣೆಗೆ ಹೋಲಿಸಿದರೆ ಬಿಜೆಪಿ ಮತ ಗಳಿಕೆಯಲ್ಲಿ ಏರಿಕೆ ಕಂಡುಬಂದಿದೆ. 2024ರಲ್ಲಿ ಶೇ 28.80ರಷ್ಟಿದ್ದ ಮತ ಗಳಿಕೆಯು ಈ ಬಾರಿ ಶೇ 33.33ಕ್ಕೆ ಏರಿಕೆಯಾಗಿದೆ.

ಅಟ್ಟಿಂಗಲ್‌ನಲ್ಲಿ ಸಿಪಿಐ(ಎಂ)ನ ಒ.ಎಸ್. ಅಂಬಿಕಾ ವಿರುದ್ಧ ಬಿಜೆಪಿಯ ಪಿ. ಸುಧೀರ್ 13,375 ಮತಗಳ ಅಂತರದಿಂದ ಪರಾಜಿತರಾದರು. ಸುಧೀರ್ 45,788 ಮತಗಳನ್ನು ಗಳಿಸಿದರು. 2021ರ ಚುನಾವಣೆಗೆ ಹೋಲಿಸಿದರೆ ಸುಧೀರ್ ಮತ ಗಳಿಕೆಯಲ್ಲೂ ಹೆಚ್ಚಳವಾಗಿದೆ. ಶೇ 25.92ರಿಂದ ಶೇ 30.54ಕ್ಕೆ ಏರಿಕೆಯಾಗಿದೆ. ಮಲಂಪುಳದಲ್ಲಿ ಸ್ಪರ್ಧಿಸಿದ್ದ ಸಿ. ಕೃಷ್ಣಕುಮಾರ್, ಕಾಸರಗೋಡಿನಲ್ಲಿ ಸ್ಪರ್ಧಿಸಿದ್ದ ಎಲ್.ಎಲ್. ಅಶ್ವಿನ್ ಮತ್ತು ಮಂಜೇಶ್ವರದಲ್ಲಿ ಸ್ಪರ್ಧಿಸಿದ್ದ ಕೆ. ಸುರೇಂದ್ರನ್, 20 ಸಾವಿರಕ್ಕೂ ಹೆಚ್ಚು ಮತಗಳ ಅಂತರರಿಂದ ಪರಾಭವಗೊಂಡಿದ್ದಾರೆ. ಅಲ್ಲದೆ 2021ರ ಚುನಾವಣೆಗೆ ಹೋಲಿಸಿದರೆ ಪಕ್ಷಕ್ಕೆ ಮತಗಳನ್ನು ಹೆಚ್ಚಿಸಲು ವಿಫಲರಾಗಿದ್ದಾರೆ. 140 ಕ್ಷೇತ್ರಗಳ ಮತ ಎಣಿಕೆಯ ಕುರಿತು ಚುನಾವಣಾ ಆಯೋಗದ ಅಂಕಿ-ಅಂಶಗಳ ಪ್ರಕಾರ, ಯುಡಿಎಫ್ 102 ಸ್ಥಾನಗಳನ್ನು ಗೆದ್ದರೆ, ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ 35 ಸ್ಥಾನಗಳನ್ನು ಗಳಿಸಿದೆ.

## ಬಿಜೆಪಿಯಿಂದ ವಿಜಯೋತ್ಸವ ಆಚರಣೆ

ಮುಂದಿನ ದಿನಗಳಲ್ಲಿ ಇಡೀ ದೇಶದಲ್ಲಿ ಭಾರತೀಯ ಜನತಾ ಪಾರ್ಟಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಅಧಿಕಾರದಲ್ಲಿ ಮುಂದುವರೆಯಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಮುಖರಾದ ರವೀಂದ್ರ ಜಲ್ದಾರ್, ರಾಘವೇಂದ್ರ ಉಟ್ಕೂರ, ಶಂಕರರೆಡ್ಡಿ, ರಾಜಕುಮಾರ, ಶಶಿರಾಜ್, ಮಹೇಂದ್ರ ರೆಡ್ಡಿ, ಭೀಮಣ್ಣ ಮಂಚಾಲ, ಶಿವಕುಮಾರ ಪೋಲಿಸ್ ಪಾಟೀಲ್, ಕಡಗೋಲ ರಾಮಚಂದ್ರ, ಮುಕ್ತಿಯಾರ್, ಯು.ನರಸರೆಡ್ಡಿ ಸೇರಿದಂತೆ ಅನೇಕರಿದ್ದರು.

## ಹಂಪನಗೌಡ ಬಾದರ್ಲಿರಿಗೆ ಸೂಕ್ತವಾದ ಸಚಿವ ಸ್ಥಾನ ನೀಡಿ: ಹರವಿ ನಾಗನಗೌಡ

ಇದೇ ವೇಳೆ ಸಂಘದ ಉಪಾಧ್ಯಕ್ಷ ಅಶೋಕ ಪಾಟೀಲ್ ಅತ್ತನೂರು ಮಾತನಾಡಿ, ಹಂಪನಗೌಡ ಬಾದರ್ಲಿ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಶಿಕ್ಷಣ ಕ್ಷೇತ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿದರೆ. ಇಡೀ ಸಮಾಜಕ್ಕೆ ದೊಡ್ಡ ಬಹುಮಾನವನ್ನು ರಾಜ್ಯ ಸರ್ಕಾರ ನೀಡಿದಂತಾಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಾಜದ ಪ್ರಮುಖರಾದ ಟಿ.ಬಸವರಾಜ, ಚುಕ್ಕಿ ಸಿವಾನಂದ, ವಿರುಪನಗೌಡ ಬಂಡಿ, ಅರಳಿ, ಶರಣಬಸವ, ಚನ್ನಬಸವ, ಆನಂದ ಪಾಟೀಲ್, ಶರಣರೆಡ್ಡಿ ಸೇರಿ ಅನೇಕರಿದ್ದರು.

## ಕಸಾಪವನ್ನು ಬೆಳೆಸಿ ಉಳಿಸಿ, ಪೋಷಿಸುವ ಜವಾಬ್ದಾರಿ ಎಲ್ಲರದ್ದು: ರವಿ ರಾಜೇಶ್ವರ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮತ್ತು ಕಲೆಗೆ ಪ್ರೋತ್ಸಾಹಿಸುತ್ತಿದೆ. ಕಸಾಪ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ ರವರ ಕಲ್ಪನೆ ಮತ್ತು ಆಶಯಗಳನ್ನು ಎಲ್ಲಾ ಕನ್ನಡಿಗರು ಸಾಕಾರಗೊಳಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ, ಸ್ಟೇಷನ್ ಬಜಾರ್‌ನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ವೈಶಾಲಿ ಪಾಟೀಲ್, ಕನ್ನಡ ಕ್ರಿಯಾ ಸಮಿತಿ (ಕೆಕೆಆರ್ ಟಿಸಿ) ಅಧ್ಯಕ್ಷ ಬಾವಸಲಿ, ಪ್ರಗತಿಪರ ಹೋರಾಟಗಾರ ಹಾಗೂ ಪ್ರಕಾಶಕ ಮಲ್ಲಪ್ಪ ಪಾಟೀಲ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಬಿ. ವಿಜಯ ರಾಜೇಂದ್ರ, ದಂಡಪ್ಪ ಬಿರಾದಾರ, ಗಡಿನಾಡು ಕನ್ನಡ ಹೋರಾಟಗಾರ ಮಲ್ಲನಗೌಡ ಹಿಂದುಪೂರು, ಹಿರಿಯ ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ, ಚಿತ್ರ ಕಲಾವಿದ ಹೇಮರೆಡ್ಡಿ ಎನ್. ಸೇರಿದಂತೆ ಅನೇಕರು ಇದ್ದರು.

## ಬಿಜೆಪಿ ಕೇಂದ್ರ ವೀಕ್ಷಕರಾಗಿ ಅಮಿತ್ ಶಾ, ನಡ್ಡಾ ನೇಮಕ

ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಸಹ-ವೀಕ್ಷಕರಾಗಿ ಕಳುಹಿಸಿಕೊಡಲು ತೀರ್ಮಾನಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಭರ್ಜರಿ ಗೆಲುವು ಸಾಧಿಸಿದ ಒಂದು ದಿನದ ನಂತರ ಈ ಘೋಷಣೆ ಹೊರಬಿದ್ದಿದೆ. ಸತತ ಮೂರನೇ ಅವಧಿಗೆ ಅಸ್ಸಾಂನಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಬಾರಿ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಅಲ್ಲಿನ ಜನರು ಐತಿಹಾಸಿಕ ತೀರ್ಪು ನೀಡಿದ್ದು ರಾಜ್ಯದಲ್ಲಿ ತೃಣಮೂಲ ಕಾಂಗ್ರೆಸ್ ಆಡಳಿತವನ್ನು ಕೊನೆಗೊಳಿಸಲು ಬಿಜೆಪಿಗೆ ಸ್ಪಷ್ಟ ಜನಾದೇಶ ನೀಡಿದ್ದಾರೆ. ಕೇಸರಿ ಪಕ್ಷವು 294 ಸದಸ್ಯರ ವಿಧಾನಸಭೆಯಲ್ಲಿ 200 ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಸಂಪೂರ್ಣ ಬಹುಮತವನ್ನು ಗಳಿಸಿದೆ. ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸಲು ಸಜ್ಜಾಗಿದೆ.

ಮೇ 9 ರಂದು ಬಂಗಾಳದಲ್ಲಿ ಸರ್ಕಾರ ರಚನೆ: ಇತ್ತೀಚಿನ ಬೆಳವಣಿಗೆಗಳ ಪ್ರಕಾರ ಹೊಸದಾಗಿ ಆಯ್ಕೆಯಾದ ಬಿಜೆಪಿ ಶಾಸಕರು ಮೇ 9 ರಂದು ನೊಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟ್ಯಾಗೋರ್ ಅವರ ಜನ್ಮ ದಿನಾಚರಣೆಯಾದ ರವೀಂದ್ರ ಜಯಂತಿಯೊಂದಿಗೆ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಲು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅಫೆಐ ಜೊತೆ ಮಾತನಾಡಿದ ಬಿಜೆಪಿ ರಾಜ್ಯ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ಪಶ್ಚಿಮ ಬಂಗಾಳದ ಹೊಸ ಮುಖ್ಯಮಂತ್ರಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 9 ರಂದು ನಡೆಯಲಿದೆ ಎಂದು ಹೇಳಿದ್ದಾರೆ.

ಏತನ್ಮಧ್ಯೆ, ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಘೆಈಅ ವಿಧಾನಸಭಾ ಚುನಾವಣೆಯಲ್ಲಿ ಸತತ ಮೂರನೇ ಬಾರಿಗೆ ಗೆಲುವು ಸಾಧಿಸಿದೆ.126 ಸದಸ್ಯರ ವಿಧಾನಸಭೆಯಲ್ಲಿ ಬಿಜೆಪಿ 82 ಸ್ಥಾನಗಳನ್ನು ಗೆದ್ದುಕೊಂಡಿದೆ. ಇದು ರಾಜ್ಯದಲ್ಲಿ ಪಕ್ಷಕ್ಕೆ ಅತ್ಯಧಿಕ ಸ್ಥಾನವಾಗಿದೆ. ಇನ್ನು ಮಿತ್ರಪಕ್ಷಗಳಾದ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಮತ್ತು ಅಎಕ ತಲಾ ಹತ್ತು ಸ್ಥಾನಗಳನ್ನು ಗೆದ್ದುಕೊಂಡಿವೆ.

## ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದ ಸಿಇಓ-ವಿಶ್ವನಾಥ ಬಲ್ಲಿದವ್ ಆರೋಪ

ಏ.23ರಂದು ಸಿಇಒ ಅವರು ಎಲ್ಲಾ ತಾಲೂಕ ಪಂಚಾಯಿತಿ ಅಧಿಕಾರಿಗಳನ್ನು ಕರೆದು ಲಂಚಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರು. ಜೊತೆಗೆ ಏ.28ರಂದು ನರೇಗಾ ಯೋಜನೆಯಡಿ ಕೆಲಸ ಮಾಡುತ್ತಿದ್ದ ತಾಂತ್ರಿಕ ಸಿಬ್ಬಂದಿ ಹಾಗೂ ಕೆಳಹಂತದ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದು ಸರಿಯಾದ ಹೆಜ್ಜೆ ಆಗಿದೆ ಆದರೆ ತಮ್ಮದೇ ಕಚೇರಿ ಅಧೀನದಲ್ಲಿ ಕೆಲಸ ಮಾಡುವ ಕೆಲ ಅಧಿಕಾರಿಗಳ ವಿರುದ್ಧ ಏಕೆ ಕ್ರಮವಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರ ಮತ್ತು ಕರ್ತವ್ಯ ಲೋಪ ಆರೋಪ ಎದುರಿಸುತ್ತಿರುವ ಪಿಡಿ ಶರಣಬಸವ, ಹೊಂಬಡ್ಸನ್ ಹಾಗೂ ಅರಕೇರ ಇಒ ಅಣ್ಣಾರಾವ್ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕಲಾಗುತ್ತಿದೆ. ಯಾದಗಿರಿ ಜಿಲ್ಲಾ ಪಂಚಾಯಿತಿಯಲ್ಲಿ ಉಪ ಕಾರ್ಯದರ್ಶಿಯಾಗಿದ್ದಾಗ ಶರಣಬಸವ ಅವರು ಸುಮಾರು 2 ಕೋಟಿ ರೂಪಾಯಿ ದುರುಪಯೋಗ ಮಾಡಿರುವ ಆರೋಪವಿದೆ. ಪ್ರಸ್ತುತ ರಾಯಚೂರು ಜಿಲ್ಲಾ ಪಂಚಾಯಿತಿಯಲ್ಲಿ ಪಿಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಅವರು ಸಿಇಒ ಗಮನಕ್ಕೆ ತರದೆ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಗಂಭೀರ ವಿಷಯ ಎಂದು ಹೇಳಿದರು.

ಅರಕೇರ ಗ್ರಾಮ ಪಂಚಾಯಿತಿಯಲ್ಲಿ ಪಿಡಿಒ ಆಗಿದ್ದ ಅಣ್ಣಾರಾವ್ ಸುಮಾರು 70 ಲಕ್ಷ ರೂಪಾಯಿ ವೆಚ್ಚದಲ್ಲಿ ಖಾಸಗಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿ ಬಿಲ್ ಎತ್ತುವಳಿ ಮಾಡಿರುವುದು ಹಾಗೂ 15 ಲಕ್ಷ ರೂಪಾಯಿ ನಕಲಿ ವರ್ಕ್ ಎಂಟ್ರಿಗಳ ಮೂಲಕ ಹಣ

ದುರುಪಯೋಗ ಮಾಡಿರುವುದು ಸ್ಪಷ್ಟವಾಗಿದ್ದರೂ ಕ್ರಮ ಕೈಗೊಳ್ಳದಿರುವುದಕ್ಕೆ ಅವರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಪ್ರಕರಣದಲ್ಲಿ 2025ರ ಜೂ.13ರಂದು ರಾಜ್ಯ ಮತ್ತು ಕೇಂದ್ರ ತಾಂತ್ರಿಕ ತಂಡ ನಡೆಸಿದ ತನಿಖೆಯಲ್ಲಿ ಗಂಭೀರ ಲೋಪಗಳು ಪತ್ತೆಯಾಗಿದ್ದು, 16 ಲಕ್ಷ ರೂಪಾಯಿ ವಸೂಲಾತಿ ಮಾಡಿ ಅಣ್ಣಾರಾವ್ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಆರ್‌ಡಿಪಿಆರ್ ಆಯುಕ್ತರು ಆದೇಶಿಸಿದ್ದರು. ಆದರೂ ಆ ಫೈಲ್ ಅನ್ನು 10 ತಿಂಗಳ ಕಾಲ ಸಿಇಒ ಗಮನಕ್ಕೆ ತರದೇ ಮುಚ್ಚಿಡಲಾಗಿದೆ ಎಂಬುದು ಅನುಮಾನ ಹುಟ್ಟಿಸುವ ಸಂಗತಿ ಎಂದು ಹೇಳಿದರು.

ಇದೇ ವೇಳೆ, ಬೇರೆ ಇಲಾಖೆಯಿಂದ ನಿಯೋಜನೆಗೊಂಡ ಅಧಿಕಾರಿಗಳು 5 ವರ್ಷಗಳ ಬಳಿಕ ಮಾತ್ರ ಇಲಾಖೆಗೆ ಹಿಂತಿರುಗಬೇಕು ಎಂಬ ಸುತ್ತೋಲೆ ಇದ್ದರೂ, ಶರಣ ಬಸವರಾಜ್ ಅವರು 16-17 ವರ್ಷಗಳಿಂದ ಜಿಲ್ಲಾ ಪಂಚಾಯಿತಿಯಲ್ಲೇ ಮುಂದುವರಿದಿರುವುದು ಹೇಗೆ ಎಂಬ ಪ್ರಶ್ನೆಯನ್ನೂ ಎತ್ತಿದರು.

ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಅಧಿಕಾರಿಗಳನ್ನು ರಕ್ಷಣೆ ಮಾಡಲಾಗುತ್ತಿದೆ ಎಂಬ ಅನುಮಾನ ಮೂಡುತ್ತಿದೆ. ತಕ್ಷಣವೇ ಇಂತಹ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಇಲ್ಲವಾದಲ್ಲಿ ಸಿಇಒ ಅವರ ಕರ್ತವ್ಯ ಲೋಪದ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವಗೇನಿ ನಾಯಕ, ಗುಂಡಪ್ಪ ನಾಯಕ ಹೇಳಿದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L